ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 42 | ಡಿಸೆಂಬರ್ 30, 1979 | 40 ಪೈಸೆ

ಮತ ಯಾರಿಗೆ?

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯು ತಾ. 20 ರಂದು ಮಂಗಳೂರಿನಲ್ಲಿ ಸಭೆ ಸೇರಿ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಪಾರ್ಟಿಯ ನಿಲುವೇನೆಂಬುದನ್ನು ಸ್ಪಷ್ಟಪಡಿಸಿತು. ಪಾರ್ಟಿಯ ಕೇಂದ್ರ ಸಮಿತಿಯ ನಿಲುವನ್ನೇ ಪುಷ್ಟೀಕರಿಸುತ್ತಾ ನಮ್ಮ ರಾಜ್ಯದಲ್ಲೂ ಸರ್ವಾಧಿಕಾರಿ, ಕೋಮುವಾದಿ ಶಕ್ತಿಗಳನ್ನು ಅಂದರೆ, ಇಂದಿರಾ ಕಾಂಗ್ರೆಸ್ಸನ್ನೂ, ಜನತಾಪಕ್ಷವನ್ನೂ ಸೋಲಿಸಬೇಕೆಂದು ತೀರ್ಮಾನಿಸಿತು. ನಮ್ಮ ರಾಜ್ಯದಲ್ಲಿ ಈ ಎರಡೂ ಶಕ್ತಿಗಳನ್ನೆದುರಿಸಲು ಇರುವ ದೊಡ್ಡ ಶಕ್ತಿಯೆಂದರೆ ಇದು ದೇವರಾಜ್ ಅರಸುರವರ ಕಾಂಗ್ರೆಸ್. ಆದರೆ ಅದೊಂದೇ ಸರ್ವಾಧಿಕಾರಿ, ಕೋಮುವಾದಿ ಶಕ್ತಿಗಳನ್ನೆದುರಿಸುವುದು ಸಾಧ್ಯವಾಗದೆಂದೂ ಸಿ. ಪಿ. ಎಂ., ಸಿ. ಪಿ. ಐ., ಲೋಕದಳ ಮುಂತಾದ ಪಕ್ಷಗಳ ಬೆಂಬಲವೂ ಅದಕ್ಕೆ ಅಗತ್ಯವೆಂದೂ ಅದು ಅಭಿಪ್ರಾಯಪಟ್ಟಿತು. ಈ ಅಂಶವನ್ನು ಕಾಂಗ್ರೆಸ್ ಮುಖಂಡರಿಗೂ, ಸಿ. ಪಿ. ಐ. ಗೂ ನಮ್ಮ ಪಾರ್ಟಿ ಮೊದಲೇ ತಿಳಿಸಿದ್ದರೂ ಕೂಡ ಅವರು ನಮ್ಮ ಪಕ್ಷಕ್ಕೆ ಯಾವ ಸ್ಥಾನವನ್ನೂ ಬಿಟ್ಟುಕೊಡದ ಕಾರಣ ಸಿ. ಪಿ. ಎಂ. ಮಂಗಳೂರು ಕ್ಷೇತ್ರದಿಂದ ತನ್ನ ಅಭ್ಯರ್ಥಿಯನ್ನು ನಿಲ್ಲಿಸಬೇಕಾಗಿ ಬಂತು. ಕರ್ನಾಟಕ ಪ್ರಾಂತ ರಾಜ್ಯಸಮಿತಿಯ ಕಾರ್ಯದರ್ಶಿಯಾದ ಕಾಂ.ಎಂ.ಕೆ.ಭಟ್

ಸಂಪಾದಕೀಯ

ರವರು ನಮ್ಮ ಅಭ್ಯರ್ಥಿಯಾಗಿ ಅಲ್ಲಿ ನಿಂತಿದ್ದಾರೆ. ನಮ್ಮ ಸರ್ವಶಕ್ತಿಯನ್ನು ಕ್ರೋಢೀಕರಿಸಿ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ನಮ್ಮ ಪಾರ್ಟಿ ಪ್ರಯತ್ನಿಸುವುದಲ್ಲದೆ, ಆ ಕ್ಷೇತ್ರದ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಅವರಿಗೆ ಬೆಂಬಲ ನೀಡಬೇಕಾಗಿ ನಾವು ವಿನಂತಿಸುತ್ತೇವೆ.

ಅದೇ ಸಂದರ್ಭದಲ್ಲಿ ನಮಗೂ ಕಾಂಗ್ರೆಸ್ಸಿಗೂ ಸಿ. ಪಿ. ಐ. ನವರಿಗೂ ಹೊಂದಾಣಿಕೆಯಾಗದಿದ್ದರೂ ಮಂಗಳೂರು ಕ್ಷೇತ್ರ ಒಂದನ್ನು ಬಿಟ್ಟು ಬೇರೆ ಕಡೆ ನಾವು ಕಾಂಗ್ರೆಸ್ (ಯು) ಉಮೇದುವಾರರಿಗೂ, ಸಿ. ಪಿ. ಐ. ಉಮೇದುವಾರರಿಗೂ ಬೆಂಬಲ ನೀಡಬೇಕೆಂದು ರಾಜ್ಯಸಮಿತಿಯ ತೀರ್ಮಾನವು ಸೂಕ್ತವಾಗಿದ್ದು ಅದಕ್ಕೆ ಎಲ್ಲ ಪಾರ್ಟಿ ಸದಸ್ಯರೂ ಶಕ್ತಿಮೀರಿ ದುಡಿಯುತ್ತಾರೆಂದು ನಾವು ನಂಬಿದ್ದೇವೆ.


ಇಂದಿರಾರವರ ಕೋಟೆಯಂತಿದ್ದ ಕರ್ನಾಟಕದಲ್ಲಿ ಸರ್ವಾಧಿಕಾರಿ ಶಕ್ತಿಗೆ ಸೋಲಾದರೆ ಅದರ ಪರಿಣಾಮ ಮಹತ್ವಪೂರ್ಣವಾಗುವುದು. ಸಿ.ಪಿ.ಎಂ.ನ ಜಯ ರಾಜ್ಯದ ದುಡಿಯುವ ಜನತೆಯ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜಯ. ಈ ಚುನಾವಣೆಯಲ್ಲಿ ಪ್ರಜಾಪ್ರಭುತ್ವ ಶಕ್ತಿಗಳಿಗೆ ಜಯವಾಗಲೆಂದು ನಾವು ಹಾರೈಸುತ್ತೇವೆ. ●

ದುಡಿಯುವ ವರ್ಗಕ್ಕೆ ಸಂಸತ್ತಿನಲ್ಲಿ ಪ್ರಾತಿನಿಧ್ಯ

ಕಾಂ. ಮಹಾಬಲೇಶ್ವರ ಭಟ್‌ರವರ ವಿಜಯವನ್ನು ಅವಲಂಬಿಸಿದೆ

ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ತಾ. 3-1-1980ರಂದು ಮತದಾನ ನಡೆಯಲಿದೆ. ನೂತನ ವರ್ಷದಲ್ಲಿ ಜನತೆ ಮುಂದಿನ ಐದು ವರ್ಷ ತಮ್ಮನ್ನು ಸಂಸತ್ತಿನಲ್ಲಿ ಪ್ರತಿನಿಧಿಸುವ ವ್ಯಕ್ತಿಯನ್ನು ಆಯ್ಕೆ ಮಾಡಬೇಕಾಗಿದೆ.





ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಅರಸು ಕಾಂಗ್ರೆಸ್ಸಿನ ಶ್ರೀ ಮೊಹಿದೀನ್, ಇಂದಿರಾ ಕಾಂಗ್ರೆಸ್ಸಿನ ಶ್ರೀ ಜನಾರ್ಧನ ಪೂಜಾರಿ, ಜನತಾಪಕ್ಷದ ಶ್ರೀ ಕರಂಬಳ್ಳಿ ಸಂಜೀವಶೆಟ್ಟಿ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ. ಮಹಾಬಲೇಶ್ವರ ಭಟ್ಟರು ನಿಂತಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೊಂದನು ಬಿಟ್ಟು, ಉಳಿದ ಅಭ್ಯರ್ಥಿಗಳೆಲ್ಲಾ ಅವರವರ ನಾಮಬಲ, ಹಣಬಲ, ಜಾತಿಬಲಗಳನ್ನು ನಂಬಿಕೊಂಡು ನಿಂತಿ

[ಕಡೆಯ ಪುಟ ನೋಡಿ]

ನಾವು ಎಡ ಐಕ್ಯತೆಗೆ ಬದ್ಧರು



ಜನ್ಮದಿನ: 21ನೇ ಡಿಸೆಂಬರ್ 1879

ಸೋವಿಯೆತ್ ಯೂನಿಯನ್ನಿನಲ್ಲಿ ಸಮಾಜವಾದೀ ವ್ಯವಸ್ಥೆಯನ್ನು ಸ್ಥಿರಗೊಳಿಸಿದ ಕಾಂ. ಸ್ಟಾಲಿನ್ ಶತಮಾನೋತ್ಸವ ಸಂದರ್ಭದಲ್ಲಿ ಅಗಲಿದ ಮಹಾನಾಯಕನಿಗೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೆಂಪು ವಂದನೆಗಳು

ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಕಾಂ.ಮಹಾಬಲೇಶ್ವರ ಭಟ್‌ರವರ ಚುನಾವಣಾ ಪ್ರಚಾರಕ್ಕಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್.ನಂಬೂದಿರಿಪಾದ್ ಪ್ರವಾಸ ಕೈಗೊಂಡಿದ್ದರು.

1968ರಲ್ಲಿ ಕಾಂ. ಇ.ಎಂ.ಎಸ್. ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾಗ ಆರ್.ಎಸ್.ಎಸ್. - ಜನಸಂಘಗಳು ಕಾರಿಗೆ ಜಖಂ ಮಾಡಿ, ದೊಂಬಿ ಎಬ್ಬಿಸಿದ್ದರು. ಈಗ ತಾ. 25-12-79ರಂದು ಅದೇ ಕೊಡಗು ಜಿಲ್ಲೆಯ ವಿರಾಜಪೇಟೆ, ಸಿದ್ದಾಪುರ, ಸುಂಟಿಕೊಪ್ಪಗಳಿಗೆ ಭೇಟಿ ನೀಡಿದಾಗ ಸುಮಾರು ಎರಡು ಮೈಲಿಗಳನ್ನು ಅಲ್ಲಲ್ಲಿ ನಡೆದುಕೊಂಡೇ ಹೋದರು. ದಾರಿಯುಲ್ಲಿ ನೆರೆದಿದ್ದ ಜನತೆ ಪುಷ್ಪಮಾಲೆ, ನೋಟಿನ ಮಾಲೆ, ಜಯಘೋಷಗಳಿಂದ ಅವರನ್ನು ಸ್ವಾಗತಿಸಿದರು. ಅವರೊಂದಿಗೆ ಪಕ್ಷದ ಅಭ್ಯರ್ಥಿ ಕಾಂ. ಎಂ.ಕೆ.ಸಹಾ ಇದ್ದರು.

ವಿರಾಜಪೇಟೆಯಲ್ಲಿ ಬೆಳಿಗ್ಗೆ 10 ಗಂಟೆಗೆ ಹಾಗೂ ಸಿದ್ದಾಪುರ, ಸುಂಟಿಕೊಪ್ಪಗಳಲ್ಲಿ ಮಧ್ಯಾಹ್ನ ಭಾರಿ ಬಹಿರಂಗ ಸಭೆಗಳುನಡೆದವು. ಪ್ರತಿಯೊಂದು ಸಭೆಗೂ ಮೊದಲು ರೈತ, ಕಾರ್ಮಿಕ, ವಿದ್ಯಾರ್ಥಿಗಳು ಹಾಗೂ ಜನಸಾಮಾನ್ಯರನ್ನು ಒಳಗೊಂಡ ಮೆರವಣಿಗೆ

ಕಾಂ. ಇ. ಎಂ. ಎಸ್.

ಗಳನ್ನು ಸಂಘಟಿಸಲಾಗಿತ್ತು. ಕಾಂ. ಇ.ಎಂ.ಎಸ್.ರವರು ಮಾತನಾಡುತ್ತಾ, ದೇಶದಲ್ಲಿ ಸರ್ವಾಧಿಕಾರಿ ಹಾಗೂ ಜಾತೀಯವಾದಿ ಶಕ್ತಿಗಳನ್ನು ಸೋಲಿಸದಿದ್ದರೆ ಮುಂಬರುವ ದಿನಗಳು ಜನತೆಗೆ ಗಂಡಾಂತರಕಾರಿಯಾಗಲಿದೆ. ಇಂದಿರಾ ಕಾಂಗ್ರೆಸ್ ಹಾಗೂ ಜನತಾ ಪಕ್ಷಗಳೆರಡೂ ತಮ್ಮಿಬ್ಬರ ಮಧ್ಯೆ ಹೊಂದಾಣಿಕೆ ಅಥವಾ ಸ್ಥಾನಗಳ ಹೊಂದಾಣಿಕೆಯ ಬಗ್ಗೆ ತಿಳುವಳಿಕೆ ಇಲ್ಲವೆಂದು ಹೇಳುತ್ತಿದ್ದರೂ, ನೆರೆಯ ಕೇರಳದಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಎರಡೂ ಪಕ್ಷಗಳು ಒಂದಾಗಿ ನಿಂತಿರುವುದರ ಅರ್ಥವೇನೆಂದು ಕೇಳಿದರು. ಹರಿಯಾನಾದಲ್ಲಿ ತನ್ನ ಮಂತ್ರಿಮಂಡಳವನ್ನು ಉಳಿಸಿಕೊಳ್ಳಲು ಜನಾತಪಕ್ಷ ಇಂದಿರಾ ಕಾಂಗ್ರೆಸ್‌ಪಕ್ಷವನ್ನೇ ಅವಲಂಬಿಸಿದೆ. ಅದಕ್ಕಾಗಿಯೇ ಅಲ್ಲಿಯ ಮುಖ್ಯಮಂತ್ರಿಗಳು ಬನ್ಸೀಲಾಲರ ವಿರುದ್ಧವಿದ್ದ ಮೊಕದ್ದಮೆಗಳನ್ನು ಹಿಂತೆಗೆದುಕೊಂಡರು. ಜಗಜೀವನರಾವ್‌ರವರನ್ನು ಪ್ರಧಾನಿಯನ್ನಾಗಿ ಮಾಡುತ್ತೇವೆಂದು ಹೇಳುವ ಜನತಾಪಕ್ಷ ತಾನುಅಧಿಕಾರದಲ್ಲಿದ್ದಾಗ ಈ ಕೆಲಸವೇಕೆ ಮಾಡಲಿಲ್ಲವೆಂದು ಪ್ರಶ್ನಿಸಿದರು. ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯ ಅತಿರೇಕ

[ಕಡೆಯ ಪುಟ ನೋಡಿ]

ಕಾರ್ಮಿಕ ವರ್ಗಕ್ಕೊಂದು ಸವಾಲು

ವಿ. ಪಿ. ಕುಲಕರ್ಣಿ

ಬರಲಿರುವ ಲೋಕಸಭಾ ಚುನಾವಣೆ ಭಾರತದ ದುಡಿಯುವ ವರ್ಗಕ್ಕೊಂದು ದೊಡ್ಡ ಸವಾಲಾಗಿದೆ.

ಕಳೆದ 10ವರ್ಷಗಳ ಅವಧಿಯಲ್ಲಿ ಕಾರ್ಮಿಕವರ್ಗ ತುಂಬಾ ಅನುಭವ ಗಳಿಸಿದೆ. ನಾವು ಈ ದಶಕದಲ್ಲಿ ಎರಡು ಬಂಡವಾಳಶಾಹಿ ಸರಕಾರಗಳನ್ನು ನೋಡಿರುವೆವು. ಒಂದನೆಯದು ಶ್ರೀಮತಿ ಗಾಂಧಿ ನೇತೃತ್ವದ ಕಾಂಗ್ರೆಸ್, ಇನ್ನೊಂದು ಜನತಾಪಕ್ಷದ ಸರಕಾರ. ಕಾರ್ಮಿಕವರ್ಗ ಸಧ್ಯದ ಲೋಕಸಭಾ ಚುನಾವಣೆಯಲ್ಲಿ ತನ್ನ ಐತಿಹಾಸಕ ಪಾತ್ರವನ್ನು ನಿರ್ವಹಿಸಬೇಕಾಗಿದೆ.

1971ರ ಲೋಕಸಭಾ ಚುನಾವಣೆಯಲ್ಲಿ ಅನೇಕ ಪ್ರಗತಿಪರ ಘೋಷಣೆಗಳೊಂದಿಗೆ ಪ್ರಚಂಡ ಬಹುಮತದಿಂದ ಆರಿಸಿ ಬಂದ ಇಂದಿರಾ ನೇತೃತ್ವದ ಬಂಡವಾಳಶಾಹಿ ಮುನ್ನಡೆಯನ್ನು ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದಲ್ಲಿ ಪಶ್ಚಿಮಬಂಗಾಲದ ಜನತೆ ಅತೀ ಯಶಸ್ವಿಯಾಗಿ ತಡೆಯಿತು. ದೇಶಾಧ್ಯಂತ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ನಡೆದ ದಬ್ಬಾಳಿಕೆಯನ್ನು ಪ.ಬಂಗಾಲವು ಧೈರ್ಯದಿಂದ ಪ್ರತಿಭಟಿಸಿತು.

1971 ಚುನಾವಣೆಯಲ್ಲಿ ಬಹುಮತ ಗಳಿಸುವುದಕ್ಕಿಂತಲೂ ಮುಂಚೆಯಿಂದಲೂ ಇಂದಿರಾಗಾಂಧಿ, ಕೇವಲ ಗುತ್ತೇದಾರಿ ಬಂಡವಾಳಗಾರರ ಪ್ರತಿನಿಧಿಯಾಗಿದ್ದಷ್ಟೇ ಅಲ್ಲ ಅತೀ ಯಶಸ್ವಿ ಪ್ರತಿಗಾಮಿಯೂ ಆಗಿದ್ದರು. CISF ಮತ್ತು CRP ದಳಗಳನ್ನು ಹಿಂತೆಗೆದುಕೊಳ್ಳಬೇಕೆಂದು 1970 ಆಗಸ್ಟ್ 12 ರಿಂದ ದುರ್ಗಾಪುರ ಕಾರ್ಮಿಕರು ಹೋರಾಟ ಪ್ರಾರಂಭಿಸಿದ್ದರು. ಸರಕಾರ ಅತೀ ಕ್ರೂರ ಕ್ರಮಗಳಿಂದ ಮುಷ್ಕರವನ್ನು ಹತ್ತಿಕ್ಕಲು ಪ್ರಯತ್ನಿಸಿತು. CISFನ 1900ಜನರನ್ನು, 15000 CRP ಜವಾನರನ್ನು ಮತ್ತು ಅರೆಮಿಲಿಟರಿಶಕ್ತಿಗಳನ್ನುಸೇರಿಸುಮಾರು 25000 ಜನರನ್ನು ದುರ್ಗಾಪುರದ 70,000 ಜನಕಾರ್ಮಿಕರ ಹೋರಾಟವನ್ನು ತುಳಿಯಲು ನೇಮಿಸಲಾಯಿತು. ಕರ್ಫ್ಯೂ ಹಾಗೂ ನಿಷೇಧಾಜ್ಞೆಗಳನ್ನು ಹೇರಲಾಯಿತು. ಇಷ್ಟೆಲ್ಲ ಪ್ರತಿಕೂಲಗಳಿದ್ದರೂ ಕಾರ್ಮಿಕರು 10ದಿನಗಳ ವೀರೋಚಿತ ಹೋರಾಟದ ನಂತರ ಮುಷ್ಕರವನ್ನು ವಾಪಸ್ ತೆಗೆದುಕೊಂಡರು. ಗಮನಾರ್ಹ ಅಂಶವೆಂದರೆ CITU ನೇತೃತ್ವದ ಯೂನಿಯನ್ ಈ ಹೋರಾಟದ ಮುಂಚೂಣಿಯಲ್ಲಿತ್ತು.

1972ರ ಪಶ್ಚಿಮ ಬಂಗಾಲದ ವಿಧಾನಸಭಾ ಚುನಾವಣೆಗಳಲ್ಲಿ ಬಹಿರಂಗವಾಗಿ ಭ್ರಷ್ಟಾಚಾರ ನಡೆಯಿತು. ಭಯಾನಕ ವಾತಾವರಣವನ್ನು ಸೃಷ್ಟಿಸಲಾಯಿತು. ಸಿ. ಐ. ಟಿ. ಯು. ನ ಮತ್ತದರ ಸಾಮೂಹಿಕ ಸಂಘಟನೆಗಳ ಮೇಲೆ ಸುವ್ಯವಸ್ಥಿತ ದಾಳಿ ನಡೆಯಿತು. ಪಶ್ಚಿಮ ಬಂಗಾಲದ "ಕಾರ್ಮಿಕ ಸಲಹಾ ಸಮಿತಿ"ಯ ಸಭೆಯಲ್ಲಿ ಈ ಕೆಳಗಿನ ಅಂಶಗಳು ಹೊರಬಂದವು. ಸುಮಾರು 150 ಜನ ಟ್ರೇಡ್ ಯೂನಿಯನ್ ಧುರೀಣರು ಮತ್ತು ಕಾರ್ಯಕರ್ತರು ಕೊಲ್ಲಲ್ಪಟ್ಟರು. 300ಕ್ಕೂ ಹೆಚ್ಚಿನ ಸಿ. ಐ. ಟಿ. ಯು. ಯೂನಿಯನ್‌ಗಳನ್ನು ಬಲಾತ್ಕಾರದಿಂದ ಕೆಲಸ ವೆಸಗದಂತೆ ಮಾಡಲಾಯಿತು. ಸುಮಾರು 4000 ಜನ ಕಾರ್ಮಿಕರು ಸಶಸ್ತ್ರ ಗೂಂಡಾದಾಳಿಗೆ ತುತ್ತಾದರು. ಸುಮಾರು 5000ಕ್ಕೂ ಹೆಚ್ಚು ಕಾರ್ಮಿಕರು,ಧುರೀಣರು ಮತ್ತು ಕಾರ್ಯಕರ್ತರು ತಮ್ಮ ತಮ್ಮ ಮನೆಗಳಿಂದಹೊಡೆದೋಡಿಸಲ್ಪಟ್ಟರು. ಕೇವಲ ದುರ್ಗಾಪುರವೊಂದರಲ್ಲೇ 14 ಜನ ಸಿ.ಐ.ಟಿ.ಯು. ಕಾರ್ಯಕರ್ತರು ಕೊಲ್ಲಲ್ಪಟ್ಟರು. ಈ ದಬ್ಬಾಳಿಕೆ ಕೇವಲ ಪಶ್ಚಿಮ ಬಂಗಾಳಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. 1974 ಏಪ್ರಿಲ್ 9 ರಂದು ಅಖಿಲ ಭಾರತ ರಾಜ್ಯ ಸರಕಾರ ನೌಕರರ ಒಕ್ಕೂಟ ಮುಷ್ಕರಕ್ಕೆ ಕರೆಕೊಟ್ಟಾಗ ಬಿಹಾರದಲ್ಲಿ 1000 ಜನ ಬಂಧಿಸಲ್ಪಟ್ಟರು ಮತ್ತು ಸುಮಾರು 1000 ಜನ ಪಾಟ್ನಾದ ಅಸೆಂಬ್ಲಿ ಹಾಲ್ ಹತ್ತಿರ ಅತೀ ಕ್ರೂರವಾಗಿ ಹೊಡೆಯಲ್ಪಟ್ಟರು. ಕೇರಳದಲ್ಲಿ ಸುಮಾರು2000ಜನ ಬಂಧಿಸಲ್ಪಟ್ಟ ಈ ಮುಷ್ಕರದನಂತರ ಮಹಾರಾಷ್ಟ್ರದ ಸುಮಾರು ಒಂದುಲಕ್ಷಜನರಿಗೆ ಅವರ ಸೇವಾಅವಧಿ(Servicecut) ಯಲ್ಲಿ ಕಡಿತ ಮಾಡಲಾಯಿತು ದಬ್ಬಾಳಿಕೆ, ಬಂಧನ ಮತ್ತು ಲಾಠೀಚಾರ್ಜು ಇತರ ರಾಜ್ಯಗಳಿಗೂ ವಿಸ್ತರಿಸಿತು. ಕೇರಳ, ರಾಜಸ್ತಾನ ಮತ್ತು ಮಹಾರಾಷ್ಟ್ರಗಳಲ್ಲಿ CITU ಧುರೀಣರ ಮೇಲೆ ಗೂಂಡಾದಾಳಿ ನಡೆಯಿತು. ಅಲ್ಲದೇ ಅನೇಕ ಕೊಲೆಗಳು ನಡೆದವು.

1974 ಮೇ 8 ರಂದು ಭಾರತದ ಕಾರ್ಮಿಕ ರಂಗದ ಇತಿಹಾಸದಲ್ಲಿಯೇ ಅತಿ ದೊಡ್ಡದಾದ ಮುಷ್ಕರವನ್ನು 20 ಲಕ್ಷ ಜನ ರೈಲ್ವೆ ಕೆಲಸಗಾರರು ಪ್ರಾರಂಭಿಸಿದರು. ಪ್ರತಿಗಾಮಿ ಸರಕಾರ ಈ ಕಾರ್ಮಿಕರ ಮೇಲೆ ಯುದ್ಧವನ್ನೇ ಪ್ರಾರಂಭಿಸಿತು. 4000ಕ್ಕೂ ಹೆಚ್ಚು ಕಾರ್ಮಿಕರು ಬಂಧಿಸಲ್ಪಟ್ಟರು, 1000ಕ್ಕೂ ಹೆಚ್ಚು ಜನ ಕೆಲಸದಿಂದ ಕಿತ್ತೊಗೆಯಲ್ಪಟ್ಟರು. ಮುಷ್ಕರ ಹತ್ತಿಕ್ಕಲು ಬೃಹತ್ ಪೋಲೀಸರ ಬಲವನ್ನು, ಅರೆ ಮಿಲಿಟರಿ ಮತ್ತು ಅನಧಿಕೃತ ಸಶಸ್ತ್ರ ದಳಗಳನ್ನು ಉಪಯೋಗಿಸಲಾಯಿತು. ಮುಷ್ಕರ ನಿರತ ಕಾರ್ಮಿಕರ ಹೆಂಡತಿ-ಮಕ್ಕಳು, ಕುಟುಂಬಗಳ ಮೇಲೆ ಹಲ್ಲೆ ನಡೆಸಲಾಯಿತು ಸಾವಿರಾರು ಕುಟುಂಬಗಳನ್ನು ಅವರವರ ಮನೆಗಳಿಂದ ಹೊರತಳ್ಳಲ್ಪಟ್ಟರು. ಕಾರ್ಮಿಕರ ನಿವಾಸಗಳಿಗೆ ವಿದ್ಯುಚ್ಛಕ್ತಿ, ನೀರು ಸರಬರಾಜು ನಿಲ್ಲಿಸಲ್ಪಟ್ಟಿತು. ಅಲ್ಲದೇ ರೈಲ್ವೆ ಕಾರ್ಮಿಕರ ಮುಷ್ಕರದ ವಿರುದ್ಧ ಪ್ರಚಾರಕ್ಕಾಗಿ ಒಂದು ಕೋಟಿಗೂ ಹೆಚ್ಚು ಹಣ ವಿನಿಯೋಗಿಸಲ್ಪಟ್ಟಿತು. ಶ್ರೀಮತಿ ಗಾಂಧಿ ನೇತೃತ್ವದ ಗುತ್ತೇದಾರಿ ಬಂಡವಾಳಶಾಹಿಯು ರೈಲ್ವೇ ಹೋರಾಟವನ್ನು ಅತೀ ಹೇಯ ಕ್ರಮಗಳಿಂದ ಹತ್ತಿಕ್ಕಿತು. ಈ ರೀತಿ ಶ್ರೀಮತಿ ಗಾಂಧಿ ಅತಿದೊಡ್ಡ ಪ್ರತಿಗಾಮಿ ಜನವಿರೋಧಿಯೆಂದು ಸಾಬೀತುಗೊಳಿಸಲ್ಪಟ್ಟಿತು.

ರೈಲ್ವೆ ಕಾರ್ಮಿಕರ ಹೋರಾಟವಲ್ಲದೇ ಈ ಅವಧಿಯಲ್ಲಿ ಅನೇಕ ಹೋರಾಟಗಳು ನಡೆದವು. ಉದಾಹರಣೆಗೆ 1974 ಜನವರಿ 13ರಿಂದ 33 ದಿನಗಳವರೆಗೆ ನಡೆದ 3 ಲಕ್ಷ ಜೂಟ್ ಕಾರ್ಮಿಕರ ಹೋರಾಟ ಮತ್ತು ಬಾಂಬೆಯ 2 ಲಕ್ಷ ಹತ್ತಿಗಿರಣಿ ಕಾರ್ಮಿಕರ ಹೋರಾಟ ಅಲ್ಲದೇ ದೇಶದ ವಿವಿದೆಡೆ 1974ರ ಫೆಬ್ರುವರಿ 10ರಿಂದ ಮಾರ್ಚ 5ರ ವರೆಗೆ ಸುಮಾರು 1 ಲಕ್ಷ ಹತ್ತಿಗಿರಣಿ ಕಾರ್ಮಿಕರು ಸತತ ಹೋರಾಟ ನಡೆಸಿದರು. ಇವುಗಳಲ್ಲದೇ ಸರಕಾರದ ದಿವಾಳಿಖೋರ ಆರ್ಥಿಕ ನೀತಿಯ ವಿರುದ್ಧ ಅನೇಕ ಗಮನಾರ್ಹ ಹೋರಾಟಗಳು ನಡೆದವು. 1972ರಲ್ಲಿ ಮುಷ್ಕರ ಮತ್ತು ಲಾಕ್‌ಔಟ್‌ಗಳಿಂದಾಗಿ 20.5 ಮಿಲಿಯನ್ ಮನುಷ್ಯದಿನ (Man Day)ಗಳು ನಷ್ಟವಾದವು. ಇದು 1973ರಲ್ಲಿ 20.6 ಮಿಲಿಯನ್,1974 ರಲ್ಲಿ 31.3ಮಿಲಿಯನ್ ಅಲ್ಲದೇ ರೈಲ್ವೆ ಹೋರಾಟವೊಂದರಲ್ಲೇ 4.5 ಮಿಲಿಯನ್ ಮನುಷ್ಯ ದಿನಗಳು ನಷ್ಟವಾದವು. ಸರಕಾರ ಕೇವಲ ದಬ್ಬಾಳಿಕೆಯಿಂದ ಮಾತ್ರವಲ್ಲದೇ - ಕಾರ್ಮಿಕ ಸಂಘಗಳು ಕಾನೂನು ಬದ್ಧವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸದ ಹಾಗೆ ನಾನಾ ಕುತಂತ್ರಗಳನ್ನು ಹೂಡಿತು.

ಮೇ 1971ರಲ್ಲಿ ಕಾರ್ಮಿಕ ಐಕ್ಯವನ್ನು ಕೇಂದ್ರೀಕರಿಸಲು ಸಿ ಐ. ಟಿ. ಯು., ಎ. ಐ. ಟಿ. ಯು. ಸಿ., ಹೆಚ್. ಎಂ. ಎಸ್. ಇನ್ನಿತರ ಕೇಂದ್ರ ಸಂಘಟನೆಗಳನ್ನೊಳಗೊಂಡ ವಿಶಾಲ ವೇದಿಕೆ ಪ್ರಾರಂಭವಾಯಿತು. ಸರಕಾರ ಈ ಐಕ್ಯತೆಯನ್ನು ಮುರಿಯಲು ಎ. ಐ. ಟಿ. ಯು. ಸಿ. ಯನ್ನು ತನ್ನೆಡೆ ಸೆಳೆದುಕೊಂಡು ಎ. ಐ. ಟಿ. ಯು. ಸಿ., ಐ.ಎನ್.ಟಿ.ಯು.ಸಿ. ಮತ್ತು ಹೆಚ್. ಎಂ. ಎಸ್.ನ ಒಂದು ವಿಭಾಗವನ್ನು ಸೇರಿಸಿ ಒಂದು ಪ್ರತಿ ಕಾರ್ಮಿಕರ ವೇದಿಕೆಯನ್ನು ರಚಿಸಿತು. ಎ. ಐ. ಟಿ. ಯು. ಸಿ. ಯ ಈ ನಾಚಿಕೆಗೇಡಿತನದ ಕ್ರಮದಿಂದ ಕಾರ್ಮಿಕರ ಐಕ್ಯ ಹೋರಾಟಕ್ಕೆ ಒಂದು ದೊಡ್ಡ ಪೆಟ್ಟಾಯಿತು.

1974 ಜುಲೈ 6ರ ಸುಗ್ರೀವಾಜ್ಞೆ ಬದಲಾಗಿ ಪಾರ್ಲಿಮೆಂಟಿನಲ್ಲಿ ಪಾಸಾದ ಕಾಯಿದೆ ಪ್ರಕಾರ ಹೊಸ ವೇತನ ಒಪ್ಪಂದಗಳು ನಿಷೇಧಿಸಲ್ಪಟ್ಟವು. ಹೆಚ್ಚಿಸಲ್ಪಟ್ಟ ಡಿ ಎ. ಯಲ್ಲಿ ಅರ್ಧವನ್ನು ಹಿಡಿದುಕೊಳ್ಳುವ ಕ್ರಮಗಳಿಂದ ಕಾರ್ಮಿಕರ ಆದಾಯಕ್ಕೆ ಪೆಟ್ಟು ಬಿದ್ದಿತು. ಈ ಅವಧಿಯಲ್ಲಿ "ಕಡ್ಡಾಯ ಠೇವಣಿ ಯೋಜನೆ"ಯನ್ನು ಕಾರ್ಮಿಕರ ಮೇಲೆ ಹೇರಲಾಯಿತು. ಇದು 18 ಮಿಲಿಯನ್ ಖಾಸಗಿ ವಲಯ (Private sectors)ಗಳ, 3 ಮಿಲಿಯನ್ ಕೇಂದ್ರ ಸರಕಾರದ, 4.6 ಮಿಲಿಯನ್ ರಾಜ್ಯ ಸರಕಾರದ, 2.5 ಮಿಲಿಯನ್ ಸಾರ್ವಜನಿಕ ಉದ್ದಿಮೆ (Public sector undertakings)ಗಳ ಮತ್ತು 1.9 ಮಿಲಿಯನ್ ಸ್ಥಳೀಯ ಸಂಸ್ಥೆಗಳ ಕಾರ್ಮಿಕರನ್ನು ಒಳಗೊಂಡಿತು. ಈ ರೀತಿ ಹಿಡಿಯಲ್ಪಟ್ಟ ನೂರಾರು ಕೋಟಿ ರೂ.ಗಳನ್ನು ಇನ್ನೂ ಪೂರ್ತಿಯಾಗಿ ಕಾರ್ಮಿಕರಿಗೆ ಪಾವತಿ ಮಾಡಲಾಗಿಲ್ಲ.(ಜನತಾ ಸರಕಾರ ಅಧಿಕಾರಕ್ಕೆ ಬಂದ ನಂತರ 4 ಕಂತುಗಳು ಮಾತ್ರ ಮರಳಿಸಲ್ಪಟ್ಟಿದೆ).

ನಂತರ ಹೊಸ ಔದ್ಯಮಿಕ ಸಂಬಂಧದ ಕಾಯಿದೆ (ಐ. ಆರ್. ಬಿ.) ಯನ್ನು ತರಲು ಯೋಚಿಸಲಾಯಿತು. ಇಂಡಿಯನ್ ಏರ್‌ಲೈನ್ಸ್ ಕಾರ್ಮಿಕರ ಮುಷ್ಕರದಲ್ಲಿ ಕಾರ್ಮಿಕರ ಸಾಮೂಹಿಕ ಚೌಕಾಶಿ ಹಕ್ಕು (Collective Bargaining) ಮತ್ತು ಟ್ರೇಡ್ ಯೂನಿಯನ್ ನಡೆಸುವ ಹಕ್ಕನ್ನು ಕಿತ್ತುಕೊಳ್ಳಲಾಯಿತು. ಈ ಹೊಸ ಕಾಯ್ದೆಯು ಮುಷ್ಕರಗಳನ್ನು ನಿಷೇಧಿಸುತ್ತಿತ್ತಲ್ಲದೇ ಮಾತುಕತೆಯ ಮೂಲಕ ಮಾತ್ರ ಇತ್ಯರ್ಥಕ್ಕೆ ಬರುವಂತೆ ಒತ್ತಾಯಿಸುತ್ತಿತ್ತು. ಅಲ್ಲದೇ ಕಾರ್ಮಿಕ ಸಂಘಗಳ ಮನ್ನಣೆ ವಿಷಯದಲ್ಲೂ ನಾನಾ ಅಡಚಣೆ ಒಡ್ಡುತ್ತಿತ್ತು. ಈ ಕ್ರಮಗಳು ಸರ್ವಾಧಿಕಾರದ ಮುನ್ಸೂಚನೆಯಂತಿದ್ದವು.

ಇಂದಿರಾ ಸರಕಾರದ ಕಾರ್ಮಿಕ ವಿರೋಧಿ ನೀತಿ 1975 ಜೂನ್ 25 ರಂದು ತುರ್ತುಪರಿಸ್ಥಿತಿ ಜಾರಿಗೊಳಿಸುವುದರ ಮೂಲಕ ಇನ್ನಷ್ಟು ಬಿಗಿಯಾಯಿತು. ಜೆ. ಪಿ ಚಳುವಳಿಯೆಂದು ದೇಶಾದ್ಯಂತ ಜನಪ್ರಿಯವಾದ ಜನತೆಯ ಸರ್ವಾಧಿಕಾರದ ವಿರುದ್ಧದ ಹೋರಾಟ ತುರ್ತುಪರಿಸ್ಥಿತಿಗೆ ಮುಖ್ಯ ಕಾರಣವಾಯಿತು.

ತುರ್ತುಪರಿಸ್ಥಿತಿಯಲ್ಲಿ ಸ್ವಲ್ಪಮಟ್ಟಿಗೆ ತನ್ನನ್ನು ವಿರೋಧಿಸಿದ ಭೂಮಾಲೀಕ ಬಂಡವಾಳಶಾಹಿ ವರ್ಗವನ್ನು ಪ್ರತಿನಿಧಿಸುತ್ತಿದ್ದ ಒಂದು ವಿಭಾಗವನ್ನು ಹತ್ತಿಕ್ಕಲು ಯತ್ನಿಸಿದರೂ ಮುಖ್ಯವಾಗಿ ಕಾರ್ಮಿಕರ ಹೋರಾಟವನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಸದೆಬಡಿಯಲು ನಿಯೋಜಿಸಲಾಯಿತು. ಲಕ್ಷಾಂತರ ಜನರನ್ನು ಜೈಲಿಗೆ ಅಟ್ಟಲಾಯಿತು. ನಮ್ಮ ರಾಜ್ಯದಲ್ಲಿ ಶ್ರೀಮತಿ ಸ್ನೇಹಲತಾರೆಡ್ಡಿ, ಕೇರಳದಲ್ಲಿ ರಾಜನ್ ಈ ರೀತಿ ಸಾವಿರಾರು ಜನ ಪೋಲೀಸ್ ದಬ್ಬಾಳಿಕೆಯಿಂದ ಜೀವತೆತ್ತು ಹುತಾತ್ಮರಾದರು. ಪತ್ರಿಕೆಗಳ ಮೇಲೆ ನಿಯಂತ್ರಣ ಹೇರಲಾಯಿತು. ಕುಟುಂಬ ಯೋಜನೆ ನೆಪದಲ್ಲಿ ಲಕ್ಷಾಂತರ ಮುಗ್ಧ ಜನತೆಯನ್ನು ಕ್ರೂರವಾಗಿ ಹಿಂಸಿಸಲಾಯಿತು. ನಗರ ನೈರ್ಮಲ್ಯ ನೆಪದಲ್ಲಿ ಸಾವಿರಾರು ಬಡಜನತೆಯ ಗುಡಿಸಲುಗಳನ್ನು ಕಿತ್ತುಬಿಸಾಡಿ ನೆಲೆ ಇಲ್ಲದ ರೀತಿ ಮಾಡಲಾಯಿತು. ದುಡಿಯುವ ಜನತೆಯ ಹೋರಾಟವನ್ನು ಶಿಸ್ತಿನ ಹೆಸರಿನಲ್ಲಿ ಅತೀ ನಿರ್ದಯವಾಗಿ ಮೆಟ್ಟಲಾಯಿತು. ಅನೇಕ ಕಾರ್ಮಿಕ ನಾಯಕರನ್ನು, ಕಾರ್ಯಕರ್ತರನ್ನು ಮೀಸಾ, ಡಿ. ಐ. ಆರ್. ಮೂಲಕ ಬಂಧಿಸಿ ಜೈಲಿಗೆ ಅಟ್ಟಲಾಯಿತು. ವಿಚಾರಣೆಯಿಲ್ಲದೇ ಜೈಲಿನಲ್ಲಿ ಕೊಳೆಸಲಾಯಿತು. ಶ್ರೀಮತಿ ಗಾಂಧಿಯವರ ಈ ಕಲ್ಯಾಣಕಾರಕ (?) ಕ್ರಮಗಳನ್ನು ಅಭಿನಂದಿಸಲು ದೊಡ್ಡ ದೊಡ್ಡ ಮಾಲೀಕರು ಕೆ. ಕೆ. ಬಿರ್ಲಾರ ನೇತೃತ್ವದಲ್ಲಿ ನಿಯೋಗ ಕೊಂಡೊಯ್ದರು.

ಕಾರ್ಮಿಕರನ್ನು ಸುವ್ಯವಸ್ಥಿತವಾಗಿ ತುಳಿಯಲು ಸರಕಾರ, ಮಾಲೀಕವರ್ಗ ಸನ್ನದ್ಧರಾದರು. ಒಂದೊಂದಾಗಿ ಹಕ್ಕುಗಳನ್ನು ಮೊಟಕುಗೊಳಿಸುವ ಕೆಲಸ ಶುರುವಾಯಿತು. ಗಮನಾರ್ಹವಾದುದೆಂದರೆ ಕಾರ್ಮಿಕರು ಅನೇಕ ವರ್ಷಗಳಿಂದ ಹೋರಾಟದಿಂದ ಪಡೆದಿದ್ದ ಬೋನಸ್ಸನ್ನು ತಡೆಯಿಡಿಯಲಾಯಿತು. ಲಾಭ ಇಲ್ಲವೇ ನಷ್ಟವಿದ್ದರೂ ಕನಿಷ್ಟ ಬೋನಸ್ಸನ್ನಾದರೂ ಕೊಡುವದೆಂದಿದ್ದರೂ ಈಗ ಇದನ್ನು ಉತ್ಪಾದನೆ ಮತ್ತು ಲಾಭಕ್ಕೆ ಜೋಡಿಸಲಾಯಿತು. ವೇತನ ಹೆಚ್ಚಳ ಸ್ಥಗಿತವಾಯಿತು. ಒತ್ತಾಯದ ಹೆಚ್ಚುವರಿ ಕೆಲಸ (work load)ದಿಂದ ಕೆಲಸದ ಅವಕಾಶಗಳು ಕಡಿಮೆಯಾದವು. ನಿರುದ್ಯೋಗ ಬೆಳೆಯಿತು. ಪಶ್ಚಿಮ ಬಂಗಾಲ ಮತ್ತು ಇತರ ರಾಜ್ಯಗಳಲ್ಲಿ ನಿವೃತ್ತಿಗಿಂತ ಮುಂಚೆಯೇ ಕಡ್ಡಾಯ ನಿವೃತ್ತಿಗೊಳಿಸುವ ಕಾಯ್ದೆ ತರಲಾಯಿತು. ಹೋರಾಟವನ್ನು ತೊಡೆದುಹಾಕಲು ಮಾಲೀಕವರ್ಗ ಲಾಕ್‌ಔಟ್, ಲೇ ಆಫ್ ಮತ್ತು ಉದ್ದಿಮೆಗಳನ್ನು ಬಂದುಮಾಡುವ ಕ್ರಮಗಳನ್ನು ಅನುಸರಿಸಹತ್ತಿದರು. ಸರಕಾರಿ ದಾಖಲೆ ಪ್ರಕಾರ 1975-76ರ ಅವಧಿಯಲ್ಲಿ 7 ಲಕ್ಷ ಜನರನ್ನು ಲೇ ಆಫ್ ಮೇಲೆ ಇಡಲಾಯಿತು. ದೇಶಾದ್ಯಂತ 1.28 ಲಕ್ಷ ಜನರನ್ನು ಕೆಲಸದಿಂದ ಕಿತ್ತೊಗೆಯಲಾಯಿತು. ಈ ಲಾಕ್‌ಔಟ್ ಇತ್ಯಾದಿಗಳಿಂದಾಗಿ 1975 ಜನವರಿ-ಜೂನ್ ಮಧ್ಯದಲ್ಲಿ

[7ನೇ ಪುಟ ನೋಡಿ]

ಮಾರ್ಕ್ಸ್ ಮತ್ತು ಮುಲ್ಲಾಗಳ ಮಧ್ಯೆ: ಇರಾನ್

ಮು. ಇಕ್‌ಬಾಲ್ ಹುಸೇನ್

ಕಳೆದ ಕೆಲವು ತಿಂಗಳಿಂದ ಇರಾನ್‌ನಲ್ಲಿ ನಡೆಯುತ್ತಿರುವ ಘಟನೆಗಳು ಜಗತ್ತಿನಲ್ಲಿ ಎಲ್ಲರ ಗಮನವನ್ನು ಸೆಳೆಯುತ್ತಿವೆ. 1963ರಲ್ಲಿ ಅಧಿಕಾರಕ್ಕೆ ಬಂದ ಷಾ, ಜನತೆಯ ಪ್ರತಿರೋಧವನ್ನು ತಡೆಯಲಾರದೆ ದೇಶದಿಂದ ಪಲಾಯನ ಮಾಡಬೇಕಾಯಿತು. ನಿಜವಾಗಿಯೂ ಸಾಮ್ರಾಜ್ಯವಾದಿಗಳಿಗೆ ಇದೊಂದು ದೊಡ್ಡ ಪೆಟ್ಟು. ಆದರೆ, ಆಂತರಿಕ ಪ್ರತಿಗಾಮಿಗಳು ಹಾಗೂ ಸಾಮ್ರಾಜ್ಯವಾದಿ ಶಕ್ತಿಗಳು ದುರ್ಬಲವಾಗಿವೆಯೇ ಹೊರತು ನಾಶವಾಗಿಲ್ಲ. ಕ್ರಾಂತಿಕಾರಿಗಳು ಹಾಗೂ ಸುಧಾರಣಾವಾದಿಗಳು ತಮ್ಮ ಧ್ಯೇಯಧೋರಣೆಗಳನ್ನು ಜನತೆಗೆ ಸ್ಪಷ್ಟಪಡಿಸುತ್ತಿರುವಂತೆ, ದೇಶದಲ್ಲಿ ರಾಜಕೀಯ ಧೃವೀಕರಣ ಪ್ರಾರಂಭವಾಗಿದೆ.

ಒಂದುಕಡೆ ಸುಧಾರಣಾವಾದಿಗಳು ಖೊಮೇನಿಯ ಜತೆಗೂಡಿ "ಖೊಮೇನಿ ಹೇಳುವಂತೆ ಸೈನಿಕರು ನಮ್ಮ ಸೋದರರು ಅವರಿಗೆ ಹೊಡೆಯಬೇಡಿ" ಎಂದು ಹೇಳುತ್ತಿದ್ದಾರೆ. ಇದನ್ನೇ ಘೋಷಣೆಯನ್ನಾಗಿ ಮಾಡಿಕೊಂಡು ಪ್ರದರ್ಶನಕಾರರು ದೇಶಾದ್ಯಂತ ಸರಕಾರದ ಪರ ಪ್ರಚಾರ ಪ್ರಾರಂಭ ಮಾಡಿದರು. ಇದಕ್ಕೆ ಪ್ರತಿಯಾಗಿ "ಆರ್ಗನೈಜೇಶನ್ ಆಫ್ ಇರಾನಿಯನ್ ಪೀಪಲ್ಸ್ ಫೆದಾಯಿ ಗೆರಿಲ್ಲಾಸ್" ಮತ್ತು "ಆರ್ಗನೈಜೇಶನ್ ಆಫ್ ಮೊಜಾಹಿದೀನ್ ಆಫ್ ದಿ ಪೀಪಲ್ ಆಫ್ ಇರಾನ್" ಸಂಘಟನೆಗಳು ಕಳೆದೆರಡು ವರ್ಷಗಳಿಂದ 70,000 ಪ್ರದರ್ಶನಕಾರರನ್ನು ಬಲಿ ತೆಗೆದುಕೊಂಡಿರುವ ಸೈನ್ಯವನ್ನು ಪುಡಿ,ಪುಡಿ ಮಾಡಲು ಜನತೆಗೆ ಕರೆನೀಡಿವೆ. ಇದಕ್ಕೆ ಕಾರಣವಿಲ್ಲದೆಯೂ ಇಲ್ಲ, ದಿನಗಳು ಕಳೆದಂತೆಲ್ಲಾ ಹೊಸ ಸರಕಾರ ಕಾರ್ಮಿಕರ, ಶೋಷಿತರ ಧ್ವನಿಯನ್ನು ಅಡಗಿಸಲು ಹೊಸ,ಹೊಸ ಕಾನೂನುಗಳನ್ನು ತರುತ್ತಿದೆ. ಸಶಸ್ತ್ರ ಸೈನಿಕರಿಂದ ಕಾರ್ಮಿಕರ ಹೋರಾಟಗಳನ್ನು ದಮನಗೊಳಿಸಲಾಗುತ್ತಿದೆ. ತಾ.21-6-79ರಂದು ಅಮೇರಿಕನ್ ಬ್ರೌನ್ ಕಂಪನಿಯ ಸುಮಾರು 200 ನೌಕರರು ತಮ್ಮ ವೇತನದ ಬಾಕಿಗಾಗಿ ಮುಷ್ಕರ ಹೂಡಿದರು. ಉತ್ತರ ರೂಪದಲ್ಲಿ ಅವರಿಗೆ ಸಿಕ್ಕಿದ್ದು ಬಂದೂಕಿನಿಂದ ಹಾರಿ ಬಂದ ಗುಂಡುಗಳು. ಏಳು ಜನ ಕಾರ್ಮಿಕರಿಗೆ ಮರಣಾಂತಿಕ ಗಾಯಗಳಾದುವು. ಸರಕಾರದ ನಗ್ನ ಫ್ಯಾಸಿಸ್ಟ್ ರೂಪವನ್ನು ತೋರಿಸುವ ಇಂತಹ ಘಟನೆಗಳು ಇರಾನ್‌ನಲ್ಲಿ ಸಾಮಾನ್ಯ ಸಂಗತಿಗಳಾಗಿಬಿಟ್ಟಿವೆ.

ಹೊಸ ಸರಕಾರ :

ಜನತೆಯ ಆಂದೋಲನದ ನಂತರ ಅಸ್ತಿತ್ವಕ್ಕೆ ಬಂದ ಹೊಸ ಇರಾನ್ ಸರಕಾರ ಸಮ್ಮಿಶ್ರ ಸರಕಾರವಾಗಿದ್ದು, ಇದರಲ್ಲಿ 1) ಕಾಂಪ್ರಡೋರ್ ಬೂರ್ಜ್ವಾಸಿ (ಅಂದರೆ ಷಾನ ಸರ್ವಾಧಿಕಾರವನ್ನು ವಿರೋಧಿಸುವ, ಆದರೆ ಸಾಮ್ರಾಜ್ಯವಾದಿಗಳೊಂದಿಗೆ ಸಹಯೋಗ ಬಯಸುವ 'ಖಾಸಗಿ ಕ್ಷೇತ್ರದ ಮಾಲೀಕರು) 2) ಅಳಿದುಳಿದ ರಾಷ್ಟ್ರೀಯ ಬಂಡವಾಳಶಾಹಿಗಳು ಹಾಗೂ 3) ಮಧ್ಯಮ ವರ್ಗದ ಸಮಾಜದಲ್ಲಿ ಮೇಲು ಸ್ಥಾನವನ್ನು ಪಡೆದಿರುವ ಸಣ್ಣ, ಪುಟ್ಟ ವ್ಯಾಪಾರಸ್ಥರು ಹಾಗೂ ಅಂಗಡಿ ಮಾಲೀಕರು (ಇವರೇ ಖೊಮೇನಿಯ ಮುಖ್ಯ ಬೆಂಬಲಿಗರು).

ಈ ಕಮ್ಯುನಿಸ್ಟ್ ವಿರೋಧಿ ಸರಕಾರದಲ್ಲಿ ರೈತ, ಕಾರ್ಮಿಕರಿಗೆ ಪ್ರಾತಿನಿಧ್ಯವಿಲ್ಲ. ಆದ್ದರಿಂದ ಜನಗಳ ಮುಖ್ಯ ಬೇಡಿಕೆಗಳಲ್ಲಿ ಒಂದು ಬೇಡಿಕೆ, ನೂತನ ಸಂವಿಧಾನವನ್ನು ರೂಪಿಸಲು ಸಂಯುಕ್ತ ವಿಧಾನಸಭೆ (Constituent Assembly) ರಚಿಸಿ, ಅದರಲ್ಲಿ ರೈತ, ಕಾರ್ಮಿಕ ಮುಂತಾದ ದುಡಿಯುವ ವರ್ಗಕ್ಕೆ ಪ್ರಾತಿನಿಧ್ಯ ನೀಡಬೇಕು ಎಂಬುದು. ಆದರೆ, ದುಡಿಯುವ ವರ್ಗದ ಪ್ರತಿನಿಧಿಗಳು ನಾಯಕತ್ವಕ್ಕೆ ಬಂದರೆ ಸಾಮ್ರಾಜ್ಯವಾದಿಗಳ ಹಾಗೂ ಕಾಂಪ್ರಡೋರ್ ಬಂಡವಾಳಶಾಹಿಗಳ ಹಿತಕ್ಕೆ ಧಕ್ಕೆಯಾಗುತ್ತದೆಂದು ಖೊಮೇನಿ ಸರಕಾರಕ್ಕೆ ತಿಳಿದಿರುವುದರಿಂದ, ದುಡಿಯುವವರ್ಗಕ್ಕೆ ಯಾವ ಪ್ರಾತಿನಿಧ್ಯವೂ ಇದುವರೆಗೆ ಸಿಕ್ಕಿಲ್ಲ. ಆದ್ದರಿಂದ ಇರಾನ್‌ನ ಎಡಶಕ್ತಿಗಳು, ಈಗ ಅಧಿಕಾರದಲ್ಲಿರುವ ಕೆಳಗಿನ ಎರಡು ವಿಭಾಗಗಳನ್ನು ಮೇಲಿನ ವಿಭಾಗದಿಂದ ಬೇರ್ಪಡಿಸಿ ಈ ಎರಡೂ ವಿಭಾಗಗಳು ಮೊದಲನೇ ವಿಭಾಗವನ್ನು ನಾಶಮಾಡುವಂತೆ ಮಾಡಲು ಪ್ರಯತ್ನಿಸುತ್ತಿವೆ. ಸಾಮ್ರಾಜ್ಯವಾದಿಗಳ ಕೈಗೊಂಬೆಗಳು ಹಾಗೂ ಪ್ರತಿಗಾಮಿಗಳ ನಿಜಸ್ವರೂಪವನ್ನು ಬಯಲು ಮಾಡಲು ಎಡ ಪಕ್ಷಗಳು ಪಾರ್ಲಿಮೆಂಟರಿ ವಿಧಾನದ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಿವೆ. ಆದರೆ, ಇರಾನ್‌ನಿಂದ ಸಾಮ್ರಾಜ್ಯವಾದವನ್ನು ಬುಡಸಹಿತ ಕಿತ್ತೊಗೆಯಲು ಕೇವಲ ಪಾರ್ಲಿಮೆಂಟರಿ ಪದ್ಧತಿಗಳಿಂದ ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳುತ್ತಾರೆ.

ಹೊಸ ಸರಕಾರದ ಬಿಗಿ ಸೆನ್ಸಾರ್‌ಶಿಪ್ ನೀತಿಯಿಂದ ರೇಡಿಯೋ, ಟೆಲಿವಿಷನ್, ಪತ್ರಿಕೆಗಳ ಮೇಲೆ ಬಿಗಿಯಾದ ಹಿಡಿತವಿದೆ ಚಿತ್ರಹಿಂಸೆ ನೀಡುವ ಟಾರ್ಚರ್ ಛೇಂಬರ್ಸ್‌ಗಳನ್ನು ಮತ್ತೆ ಪ್ರಾರಂಭಿಸಲಾಗಿದೆ. ಸೆನ್ಸಾರ್‌ಶಿಪ್‌ನ ವಿರುದ್ಧ ರೇಡಿಯೋ, ಟೆಲಿವಿಷನ್‌ಗಳಲ್ಲಿ ಕೆಲಸ ಮಾಡುವ 200,000 ಜನ ಇತ್ತೀಚೆಗೆ ಮತಪ್ರದರ್ಶನ ನಡೆಸಿದರು.

ಖೊಮೇನಿ ಸರಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಎಡ ಪಕ್ಷಗಳ ಕಛೇರಿ, ಪುಸ್ತಕದ ಅಂಗಡಿಗಳನ್ನು ಕಂಡಕಂಡಲ್ಲಿ ಧ್ವಂಸ ಮಾಡುವುದು ವಾರಗಟ್ಟಲೆ ನಡೆಯಿತು. ತಾ. 10-8-79ನೇ ಶುಕ್ರವಾರ ಮಸೀದಿಯಿಂದ ಹೊರಬಂದ ಗುಂಪೊಂದು ಫಿದಾಯಿ ಗುಂಪಿನ ಪುಸ್ತಕಾಲಯವನ್ನು ಸುಟ್ಟುಹಾಕಿತು. ಇದು ನಡೆದದ್ದು ಅಜರ್‌ಬೈಜಾನಿ ನಗರದಲ್ಲಿ. ಇದನ್ನು ಅನುಸರಿಸಿ ಸೋಮವಾರ ಟೆಹರಾನಿನಲ್ಲಿ ಎಲ್ಲಾ ಎಡ ಪಕ್ಷಗಳ ಪುಸ್ತಕದ ಅಂಗಡಿಗಳು ಧಾಳಿಗೀಡಾದವು.

ಇಸ್ಲಾಮಿಕ್ ರಿಪಬ್ಲಿಕ್ :

ಖೊಮೇನಿಯವರು ಕರೆ ನೀಡಿದ್ದ ಜನಾಭಿಪ್ರಾಯ ಸಂಗ್ರಹಣೆಯ ಕುರಿತು ಹೇಳುವುದಾದರೆ, ಜನತೆಗೆ ಎರಡು ಪ್ರಶ್ನೆಗಳನ್ನು ಕೇಳಲಾಗಿತ್ತು. "ನಿಮಗೆ ರಾಜಪ್ರಭುತ್ವ ಬೇಕೋ ?", "ಇಸ್ಲಾಮಿಕ್ ಗಣತಂತ್ರ ಬೇಕೋ ?" ಎಂಬುದೇ ಪ್ರಶ್ನೆಗಳು. ಉತ್ತರವನ್ನು ಇಸ್ಲಾಮಿಕ್ ಗಣತಂತ್ರ ಬೇಕಾಗಿರುವವರು ಮಾತ್ರ ಮತಕಟ್ಟೆಗೆ ಹೋಗಿ ಮತ ಚಲಾಯಿಸುವುದರ ಮೂಲಕ ಕೊಡಬಹುದಾಗಿತ್ತು. ಇಸ್ಲಾಮಿಕ್ ಗಣತಂತ್ರವೆಂದರೆ ಏನೆಂಬುದನ್ನು ವಿವರಿಸದೆ, ಎಂತಹ ಪದ್ಧತಿಗೆ ತಾವು ಓಟು ಹಾಕುತ್ತಿದ್ದೇವೆ ಎನ್ನುವುದನ್ನು ಜನತೆ ತಿಳಿಯುವುದು ಹೇಗೆ ? ಇರಾನ್‌ನಲ್ಲಿ ನಡೆದ ಜನತೆಯ ಆಂದೋಲನವನ್ನು ಇಸ್ಲಾಮಿಕ್ ಕ್ರಾಂತಿ ಎನ್ನುವುದಾದರೆ, ಮುಸ್ಲಿಮೇತರರು ಮಾಡಿದ ತ್ಯಾಗ, ಬಲಿದಾನಗಳು ಏನಾದವು ? ಅಲ್ಪಸಂಖ್ಯಾತರು, ಮಹಿಳೆಯರ ಪಾಡೇನು ?

ಜನತೆ ನಿಜವಾಗಿ ಬಯಸುತ್ತಿರುವುದು ಇಸ್ಲಾಮಿಕ್ ರಿಪಬ್ಲಿಕ್ ಅಲ್ಲವೆಂಬುದನ್ನು ಮೊಸಾದೆಕ್‌ರವರು ಹುತಾತ್ಮರಾದ ದಿನಾಚರಣೆಯಂದು ಸೇರಿದ್ದ ಹತ್ತು ಲಕ್ಷ ಜನರ ಮೆರವಣಿಗೆ ಹಾಗೂ ಮಾರ್ಚಿ 8 ರಂದು ಟೆಹರಾನಿನಲ್ಲಿ ರಾಜಕೀಯ ಹಕ್ಕುಗಳಿಗಾಗಿ ಮಹಿಳೆಯರು ನಡೆಸಿದ ಬೃಹತ್ ಮತಪ್ರದರ್ಶನಗಳು ಸ್ಪಷ್ಟಪಡಿಸಿವೆ. ಮಹಿಳೆಯರ ಪ್ರತಿಭಟನೆ ಎಷ್ಟು ತೀವ್ರವಾಗಿತ್ತೆಂದರೆ ಖೊಮೇನಿಯವರು ಕೂಡಲೇ ಹೇಳಿಕೆ ಒಂದನ್ನು ನೀಡಿ ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಕಾನೂನುಗಳನ್ನು ಹೇರುವುದಿಲ್ಲವೆಂದು ತಿಳಿಸಬೇಕಾಯಿತು. ಪ್ರತಿಭಟನೆಯ ನಂತರ ಕಡ್ಡಾಯ ಬುರುಖಾ ಪದ್ಧತಿಯಿಲ್ಲವಾದರೂ, ಇಸ್ಲಾಮಿಕ್ ಸಂವಿಧಾನ ಜಾರಿಗೆ ಬಂದ ಮೇಲೆ ಪರಿಸ್ಥಿತಿ ಏನಾಗುತ್ತದೆಂದು ಹೇಳಲಾಗುವುದಿಲ್ಲ. ಈಗಾಗಲೇ ಮಹಿಳೆಯರ ಕ್ರೀಡೆಗಳನ್ನು ಬಹಿಷ್ಕರಿಸಲಾಗಿದೆ. ಶೇಕಡ 85ರಷ್ಟು ಮಹಿಳಾ ಅಧ್ಯಾಪಕರೇ ಇದ್ದ ಪ್ರೈಮರಿ ಹಾಗೂ ಸೆಕೆಂಡರಿ ಶಾಲೆಗಳು ಸರಕಾರದ ನೀತಿಯಿಂದ ಮುಚ್ಚಲ್ಪಟ್ಟಿವೆ. ಮಾರ್ಚ್ ತಿಂಗಳ ಹೋರಾಟದ ನಂತರ ಎರಡನೇ ಹಂತದ ಕೆಲಸವೇ ನಡೆದಿಲ್ಲದಿರುವುದು ಎಡ ಪಕ್ಷಗಳ ದುರ್ಬಲತೆಯನ್ನು ಎತ್ತಿ ತೋರಿಸುತ್ತದೆ.

ಎಡ ಸಿದ್ಧಾಂತವನ್ನು ಪಾಶ್ಚಾತ್ಯರಿಂದ ಪ್ರಭಾವಿತವಾದದ್ದು, ನಮ್ಮ ಸಂಸ್ಕೃತಿ, ಸಂಪ್ರದಾಯಗಳಿಗೆ ಅದು ಒಗ್ಗುವುದಿಲ್ಲವೆಂದು ಹೇಳುವ ಖೊಮೇನಿ ಬುದ್ಧಿಜೀವಿಗಳನ್ನು ಅದರಲ್ಲೂ ಲೇಖಕರು, ವಕೀಲರುಗಳನ್ನು ಕಂಡರೆ ಕೆಂಡಕಾರುತ್ತಾನೆ, ಸಾಮ್ರಾಜ್ಯವಾದಿಗಳ ಹಸ್ತಕರೆಂದು ದೂರುತ್ತಾನೆ. ಆದರೆ, ಖೊಮೇನಿಯೇ ಸಿ. ಐ. ಎ ಏಜೆಂಟ್ ಎಂದು ಇರಾನ್ ಜನತೆ ಗುಸುಗುಸು ಮಾತನಾಡುತ್ತಾರಂತೆ.

ಷಾ ವಿರುದ್ಧ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಅನೇಕರು ಈಗ ಸರಕಾರ ಮತ್ತು ಪ್ರತಿಗಾಮಿಗಳ ದಬ್ಬಾಳಿಕೆಯನ್ನು ಎದುರಿಸಬೇಕಾಗಿದೆ. ಷಾ ಆಡಳಿತದಲ್ಲಿ ಅನೇಕ ವರ್ಷ ಸೆರೆಮನೆಯಲ್ಲಿದ್ದ ಗೆರಿಲ್ಲಾ ನಾಯಕ ಮೊಹಮ್ಮದ್ ರೇಜಾ ಸಾದತಿ ಈಗ "ಸೋವಿಯೆತ್ ಬೇಹುಗಾರ" ನೆಂದು ಚಿತ್ರಹಿಂಸೆ ಅನುಭವಿಸುತ್ತಾ ಮತ್ತೆ ಸೆರೆಮನೆಯಲ್ಲಿದ್ದಾನೆ. ಎಂಟು ವರ್ಷ ಕಾಲ ಷಾನ ಬಂಧಿಯಾಗಿದ್ದ ಕವಿ ನಸೀಂ ಖಾಕ್‌ಸಾರ್ ಹಾಗೂ ಸೋಷಲಿಸ್ಟ್ ವರ್ಕರ್ಸ್ ಪಾರ್ಟಿಯ ಕಾರ್ಯಕರ್ತರು ದಕ್ಷಿಣ ಭಾಗವಾದ ಅಹವಾಜ್ ಪಟ್ಟಣದಲ್ಲಿ ಬಂಧಿತರಾಗಿ ಇನ್ನೂ ವಿಚಾರಣೆಯನ್ನು ಎದುರಿಸುತ್ತಿದ್ದಾರೆ.

ಇರಾನ್‌ನ ಪಶ್ಚಿಮದಲ್ಲಿರುವ ಕುರ್ದಿಸ್ತಾನ್ ಫೆಬ್ರವರಿ 79 ರಲ್ಲಿ ಷಾ ದೇಶವನ್ನು ಬಿಟ್ಟುಹೋದ ನಂತರ ಕುರ್ದಿಸ್ತಾನಕ್ಕೆ ಪ್ರತ್ಯೇಕ ರಾಜ್ಯದ ಸ್ಥಾನಮಾನವನ್ನು ಕೊಡಬೇಕೆಂಬುದು ಅಲ್ಲಿಯ ಜನರ ಬೇಡಿಕೆ. ಅನೇಕ ರಾಷ್ಟ್ರೀಯತೆಗಳನ್ನು ಹೊಂದಿರುವ ಇರಾನ್‌ನಂತಹ ದೇಶದಲ್ಲಿ ಸ್ವಯಮಾಡಳಿತ ಅಧಿಕಾರದ ಪ್ರತ್ಯೇಕ ರಾಜ್ಯ ಬೇಕು ಎನ್ನುವುದು ಮಾತ್ರ ಅವರ ಬೇಡಿಕೆ. ಈ ಬೇಡಿಕೆಗಾಗಿ 2000 ಕ್ಕೂ ಹೆಚ್ಚು ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಕುರ್ದಿಸ್ತಾನದ ಜನತೆಯ ನಾಯಕರನ್ನು ಹಾಗೂ ಜನತೆಯ ಆಂದೋಲನವನ್ನು ಪ್ರಸಕ್ತ ಸರಕಾರ ವಿದೇಶಿ ಹಸ್ತಕರೆಂದು ಹೆಸರಿಸಿ ಜನರನ್ನು ವಂಚಿಸುತ್ತಿದೆ.

628.000 ಚದರ ಮೈಲಿಗಳಷ್ಟು ವಿಸ್ತೀರ್ಣವುಳ್ಳ ಇರಾನ್‌ನ ಜನಸಂಖ್ಯೆ 35 ಮಿಲಿಯನ್. 32 ಬಿಲಿಯನ್ ರಾಷ್ಟ್ರೀಯ ಆದಾಯದಲ್ಲಿ, 20 ಬಿಲಿಯನ್ ಎಣ್ಣೆಯಿಂದಲೇ ಸಿಗುತ್ತದೆ. ಶೇಕಡ 63.5 ಕಾರ್ಮಿಕರು ವಿಶ್ವದ ಅತ್ಯಂತ ದುಬಾರಿ ನಗರಗಳಲ್ಲಿ ಒಂದಾದ ಟೆಹರಾನಿನಲ್ಲಿ ವಾರಕ್ಕೆ ಏಳು ಡಾಲರ್‌ಗಳಿಸುತ್ತಾರೆ. ಖಾಸಗಿ ಹಾಗೂ ಸರ್ಕಾರಿ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆ 3,50,000. ಒಂದು ಮಿಲಿಯನ್ ಕೃಷಿಕೂಲಿಗಾರರನ್ನು ಸೇರಿಸಿದಂತೆ ಒಟ್ಟು ರೈತವರ್ಗದ ಅಂದಾಜು ಸಂಖ್ಯೆ ಮೂರು ಮಿಲಿಯನ್. ಇರಾನ್‌ನಲ್ಲಿ ವೇಶ್ಯಾವೃತ್ತಿಯನ್ನೇ ನಂಬಿ ಬದುಕುತ್ತಿರುವ ಮಹಿಳೆಯರ ಸಂಖ್ಯೆ 10,000 ವೇಶ್ಯಾವೃತ್ತಿಯನ್ನು ಉಪ-ಕಸುಬಾಗಿ ಉಳ್ಳವರ ಸಂಖ್ಯೆ 30,000 ದಿಂದ 50,000.

ಖೊಮೇನಿಯವರ ಸರಕಾರ ಧರ್ಮದ ಹೆಸರಿನಲ್ಲಿ ಜನತೆಯನ್ನು ಶತಮಾನಗಳಷ್ಟು ಹಿಂದಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನಿಸುತ್ತದೆ. ಸಂಗೀತ, ನಾಟಕ, ನೃತ್ಯಗಳು ನಿಷಿದ್ಧವೆಂದು ಘೋಷಿಸಿರುವ ಈ ದೇಶದಲ್ಲಿ, ಎಲ್ಲವೂ ತೆರೆಯ ಮರೆಯಲ್ಲಿ ನಡೆಯತೊಡಗಿದೆ. ಸಾಮ್ರಾಜ್ಯವಾದವನ್ನು ದೂಷಿಸುವ ಖೊಮೇನಿಯವರು ಸಾಮ್ರಾಜ್ಯವಾದಿಗಳೊಂದಿಗೆ ಆರ್ಥಿಕ ಸಂಬಂಧಗಳನ್ನು ತೊರೆಯಲು ಸಿದ್ಧವಾಗಿಲ್ಲದಿರುವುದನ್ನು ಎಡಪಕ್ಷಗಳು ಜನತೆಗೆ ತೋರಿಸುತ್ತಿದ್ದಾರೆ. ಸರಕಾರದ ಕಾರ್ಮಿಕ ವಿರೋಧಿ ನೀತಿಗಳಿಂದಾಗಿ ಅನೇಕ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಕೆಲವು ಕಾರ್ಖಾನೆಗಳು ಕನಿಷ್ಟ ಉತ್ಪಾದನೆಗಳನ್ನು ಮಾತ್ರ ಮಾಡುತ್ತಿವೆ.

ಕಮ್ಯುನಿಸ್ಟ್ ವಿರೋಧಿ ಪ್ರಚಾರ ಕೇವಲ ರೇಡಿಯೋ, ಪತ್ರಿಕೆಗಳಲ್ಲಿ ಮಾತ್ರವಲ್ಲದೆ ಮಸೀದಿಗಳಲ್ಲಿ ಪ್ರಾರ್ಥನೆಗಳೊಂದಿಗೆ ನಡೆಯುವ ಪ್ರವಚನೆಯಲ್ಲೂ ನಡೆಯುತ್ತಿದೆ. ಆದರೆ ಸ್ಥಳೀಯರು ಹೇಳುವಂತೆ ಎಡ ಪಕ್ಷಗಳ ಐಕ್ಯತೆ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಮತ್ತೆ ತರುವುದು ಖಂಡಿತ. ಇರಾನ್‌ನ ಕಮ್ಯುನಿಸ್ಟ್ ಪಕ್ಷ (ಇದನ್ನು ತ್ಯುದೇಹ್ ಪಾರ್ಟಿ ಎನ್ನುತ್ತಾರೆ ಇರಾನ್‌ನಲ್ಲಿ) 1941 ರಲ್ಲಿ ಸ್ಥಾಪಿಸಲ್ಪಟ್ಟು ಈಗ ದೇಶದಲ್ಲಿ ಅತಿದೊಡ್ಡ ಎಡ ಸಂಘಟನೆಯಾಗಿದೆ. ಪಕ್ಷದ ಮುಖಂಡ ಹಾಗೂ ಸಿದ್ಧಾಂತಿ ಎಹ್‌ಸಾನ್ ತಬಾರಿ ಖೊಮೇನಿಯರಿಗೆ ಮೊಮ್ಮಗನಾಗಬೇಕು. ಅಲ್ಲದೆ, ಆರ್ಗನೈಜೇಶನ್ ಆಫ್ ಇರಾನಿಯನ್ ಪೀಪಲ್ಸ್ ಫೆದಾಯಿ ಗೆರಿಲ್ಲಾಸ್ ಮತ್ತು ಆರ್ಗನೈಜೇಶನ್ ಆಫ್ ಮೊಜಾಹಿದೀನ್ ಆಫ್ ದಿ ಪೀಪಲ್ ಆಫ್ ಇರಾನ್ ದೇಶದಲ್ಲಿ ಸಾಕಷ್ಟು ಜನಪ್ರಿಯತೆ, ಸಂಘಟನೆಗಳನ್ನು ಹೊಂದಿವೆ.

ಇರಾನ್‌ಗೆ ಭೇಟಿಕೊಟ್ಟ ಪತ್ರಕರ್ತರೊಬ್ಬರು ವರದಿ ಮಾಡಿರುವಂತೆ "ದೇವರ ಹೆಸರಿನಲ್ಲಿ ಪ್ರಭುತ್ವ ನಡೆಸುತ್ತಿರುವ ಈ ದೇಶದಲ್ಲಿ ಸದ್ಯಕ್ಕೆ ಸೈತಾನ ಮಾತ್ರ ಓವರ್‌ಟೈಂ ಕೆಲಸ ಮಾಡುತ್ತಿದ್ದಾನೆ". ಜನತೆಯ ಆಶಾಕಿರಣವಾಗಿ ಉಳಿದಿರುವ ಒಂದೇ ಒಂದು ಮಾರ್ಗವೆಂದರೆ ಐಕ್ಯ ಎಡ ಪಕ್ಷಗಳ ನೇತೃತ್ವದಲ್ಲಿ ವರ್ಗ ಹೋರಾಟವನ್ನು ನಡೆಸುವುದು. ಅದು ದೇಶದಲ್ಲಿ ಮತ್ತೆ ಪ್ರಜಾಪ್ರಭುತ್ವ ನೆಲೆಗೊಳಿಸುವುದೆಂಬ ಆತ್ಮವಿಶ್ವಾಸ ಇರಾನ್ ಜನತೆಗಿದೆ.

●

ಕಾರ್ಮಿಕ ವಿರೋಧಿ, ರೈತ ವಿರೋಧಿ ಕಾಂಗ್ರೆಸ್ (ಐ) ಪ್ರಣಾಳಿಕೆ

—ಬಿ. ಟಿ. ರಣದಿವೆ

ಈ ಸಲದ ಕಾಂಗ್ರೆಸ್ (ಐ) ಚುನಾವಣಾ ಪ್ರಣಾಳಿಕೆ ಸರ್ವವ್ಯಾಪಿಯಾಗಿದೆ. ಬಹುಶಃ ಅದು ಹೆಗ್ಗಳಿಕೆ ಪಟ್ಟುಕೊಳ್ಳಬಹುದಾದ ಅಂಶ ಇದೊಂದೇ. ಕಾಂಗ್ರೆಸ್ ಪುರಾಣದಿಂದ ಆರಂಭಿಸಿ ಪರಿಸರ ವಿಜ್ಞಾನದವರೆಗೆ, ಮನುಷ್ಯರ ಎಲ್ಲಾ ಸಮಸ್ಯೆಗಳಿಂದ ತೊಡಗಿ ವನ್ಯಮೃಗ ಸಂರಕ್ಷಣೆಯವರೆಗೆ ಯಾವುದೂ ಅದರ ಹದ್ದಿನ ಕಣ್ಣಿನಿಂದ ತಪ್ಪಿಸಿಕೊಂಡಿಲ್ಲ.

ಆದರೆ ಮುಂಬರುವ ಚುನಾವಣೆಯಲ್ಲಿ ಬಹಳ ಮಹತ್ವಪಡೆದಿರುವ ಪ್ರಜಾಸತ್ತೆ ಮತ್ತು ಸರ್ವಾಧಿಕಾರದ ಪ್ರಶ್ನೆಗಳ ಬಗ್ಗೆ ಮಾತ್ರ ಅದು ಮೌನವಹಿಸಿದೆ. ಇನ್ನು ಇತರ ಕೆಲವು ವಿಷಯಗಳಲ್ಲಂತೂ ಅದರಲ್ಲಿ ಅಲ್ಪಸ್ವಲ್ಪವಾದರೂ ಪ್ರಾಮಾಣಿಕತೆ ಮತ್ತು ವಾಸ್ತವಿಕ ದೃಷ್ಟಿಕೋಣವಿರುವುದನ್ನು ಒಪ್ಪಿಕೊಳ್ಳಲೇಬೇಕು. ಉದಾಹರಣೆಗೆ ಪರಿಶುದ್ಧ ಆಡಳಿತೆಯನ್ನಾಗಲೀ ಭ್ರಷ್ಟಾಚಾರದ ನಿವಾರಣೆಯನ್ನಾಗಲೀ ಮಾಡುವುದಾಗಿ ಕಾಂಗ್ರೆಸ್ (ಐ)ನ ಪ್ರಣಾಳಿಕೆ ಹೇಳಿಕೊಂಡಿಲ್ಲ. ಮಾರುತಿ ಕರ್ಮಕಾಂಡ ಇನ್ನೂ ವಿಚಾರಣೆಯ ಹಂತದಲ್ಲಿರುವಾಗ ಮತ್ತು ಜೀಪ್ ಹಗರಣದ ಮೊಕದ್ದಮೆ ನ್ಯಾಯಾಲಯದಲ್ಲಿರುವಾಗ ಇಂತಹ ಆಶ್ವಾಸನೆ ನೀಡುವುದಾದರೂ ಹೇಗೆ? ಹಾಗಾಗಿ ಇಂದಿರಾಗಾಂಧಿ ಮತ್ತು ಸಂಜಯಗಾಂಧಿ ವಿರುದ್ಧ ನಡೆಯುತ್ತಿರುವ ಮೊಕದ್ದಮೆಗಳನ್ನು ಅವು ರಾಜಕೀಯ ದ್ವೇಷ ಸಾಧನೆಯ ಕೃತ್ಯಗಳೆಂದು ಅದು ಟೀಕಿಸಿದೆ. ಭ್ರಷ್ಟಾಚಾರದಿಂದ ವಿಮುಕ್ತವಾದ ಸರಕಾರವನ್ನಾಗಲೀ ವೈಯ್ಯುಕ್ತಿಕ ದ್ವೇಷ ಸಾಧನೆಗಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂದಾಗಲೀ ಅದು ಎಲ್ಲೂ ಆಶ್ವಾಸನೆ ನೀಡಿಲ್ಲ. ಕಾಂತಿ ದೇಸಾಯಿ ಪ್ರಕರಣಕ್ಕೆ ಸಂಬಂಧಿಸಿ ಎರಡು ತಿಂಗಳ ಕಾಲ ಕಾಂಗ್ರೆಸ್ ಪಕ್ಷವು ರಾಜ್ಯಸಭೆಯ ಎಲ್ಲಾ ಕಲಾಪಗಳನ್ನು ಸ್ಥಗಿತಗೊಳಿಸಿದ್ದರೂ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂತಿ ಹಗರಣದ ಬಗ್ಗೆ ಕಾಂಗ್ರೆಸ್ (ಐ) ಏನೂ ಹೇಳದಿರುವುದಕ್ಕೆ ಅದರ ಈ ಸಂದಿಗ್ಧವೇ ಕಾರಣ.

ಕಣ್ಮರೆಯಾದ ಆರೆಸ್ಸೆಸ್ ಟೀಕೆ:

ಪ್ರಣಾಳಿಕೆಯಲ್ಲಿ ಇನ್ನೊಂದು ಮುಖ್ಯ ವಿಷಯ ಕಾಣೆಯಾಗಿದೆ. ಆರೆಸ್ಸೆಸ್ ಮತ್ತು ಜನಸಂಘದ ಸಿದ್ಧಾಂತಗಳ ವಿರುದ್ಧ ಹೋರಾಟ ಮಾಡುತ್ತಿರುವವಳು ತಾನು ಮಾತ್ರವೆಂದು ಇಂದಿರಾಗಾಂಧಿ ಸದಾಕಾಲ ಹೇಳಿಕೊಳ್ಳುತ್ತಿದ್ದಾರೆ. ಆದರೆ ಈ ಪಣ್ರಾಳಿಕೆಯಲ್ಲಿ ಆರೆಸ್ಸೆಸ್-ಜನಸಂಘಗಳನ್ನು ಖಂಡಿಸುವ ಅಥವಾ ಅವುಗಳ ಪ್ರಭಾವವನ್ನು ತಡೆಹಿಡಿಯುವಂತಹ ಯಾವುದೇ ಮಹತ್ವದ ಪ್ರಸ್ತಾಪವಿಲ್ಲ. ಜಮ್‌ಶೆಡ್‌ಪುರ ಕೋಮು ಗಲಭೆಗಳಿಗೆ ಸಂಬಂಧಿಸಿ ಒಮ್ಮೆ ಮಾತ್ರ ಆರೆಸ್ಸೆಸ್‌ನ ಹೆಸರನ್ನು ಪ್ರಸ್ತಾಪಿಸಲಾಗಿದೆ. ಜನಸಂಘದ ವಿಷಯ ಏನೂ ಹೇಳಲಾಗಿಲ್ಲ. ಕೋಮುವಾದಿ ಮತ್ತು ಜಾತೀಯವಾದಿ ಇತ್ಯಾದಿ ಶಕ್ತಿಗಳ ವಿರುದ್ಧ ಕಾಂಗ್ರೆಸ್ (ಐ) ಪಕ್ಷವು ಹೋರಾಟ ನಡೆಸುವುದು ಎಂಬ ಸಾಮಾನ್ಯ ಆಶ್ವಾಸನೆಯೊಂದನ್ನು ಮಾತ್ರ ನೀಡಲಾಗಿದೆ ಹೊರತು ಈ ಜಾತೀಯವಾದಿ ಕೋಮುವಾದಿ ಶಕ್ತಿಗಳು ಯಾರೆಂಬುದನ್ನು ಹೆಸರಿಸಲಾಗಿಲ್ಲ. ಜನತಾ ಪಕ್ಷದೊಳಗೆ ಆರೆಸ್ಸೆಸ್ ಮತ್ತು ಜನಸಂಘದಪ್ರಾಬಲ್ಯವೇ ಹೆಚ್ಚಾಗಿರುವುದು ಮತ್ತು ದ್ವಂದ್ವ ಸದಸ್ಯತನದ ಬಗ್ಗೆ ಜನತಾಪಕ್ಷದೊಳಗೆ ಯಾವುದೇ ಗಂಭೀರವಾದ ವಿವಾದವಿಲ್ಲದಿರುವುದರ ಹಿನ್ನೆಲೆಯಲ್ಲಿ ಅವುಗಳ ಬಗ್ಗೆ ಕಾಂಗ್ರೆಸ್ (ಐ) ಏನೂ ಹೇಳದಿರುವುದು ಗಮನಾರ್ಹವಾಗಿದೆ.

ಕೆಲವೇ ದಿನಗಳ ಹಿಂದೆ ದೇಶದ ಆಡಳಿತೆಯು ಆರೆಸ್ಸೆಸ್ ಕೂಟದ ಕೈಗೆ ಇನ್ನೇನು ಹೋಗಿಯೇ ಬಿಟ್ಟಿತು ಅನ್ನುವ ಪರಿಸ್ಥಿತಿಯುಂಟಾಗಿದ್ದಾಗ, ಮತ್ತು ಇಂದು ಕೂಡಾ ಆರೆಸ್ಸೆಸ್ ಕೋಮುವಾದಿಗಳ ಸವಾಲು ತೀರಾ ಗಂಭೀರವಾಗಿರುವಾಗ ಅದರ ಅಪಾಯವನ್ನು ಕಾಂಗ್ರೆಸ್ (ಐ) ಉಪೇಕ್ಷಿಸಿರುವುದೂ, ಕೋಮುವಾದಿಗಳ ಸಿದ್ಧಾಂತವನ್ನು ಖಂಡಿಸಲು ಅಂಜುತ್ತಿರುವುದೂ ಆಶ್ಚರ್ಯಕರ! ಈ ಔದಾರ್ಯ, ಅಂಜಿಕೆಗಳ ಅರ್ಥವೇನು? ವಿಷಮ ಪರಿಸ್ಥಿತಿಯ ಅಪರಾಧಗಳನ್ನು ಮರೆತುಬಿಡೋಣ, ಅಪರಾಧಿಗಳನ್ನು ಕ್ಷಮಿಸೋಣ ಎಂಬ ಬಾಳಾಸಾಹೇಬ್ ದೇವರಸರ ಮನವಿಗೆ ಇದು ಕಾಂಗ್ರೆಸ್ (ಐ)ನ ಪ್ರತಿಕ್ರಿಯೆಯೆ? ಅಥವಾ ಬನ್ಸಿಲಾಲ್ ವಿರುದ್ಧ ಹಾಕಲಾಗಿದ್ದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಾದುದರ ಹಿನ್ನೆಲೆಯಲ್ಲಿ ಜನತಾಪಕ್ಷದೊಂದಿಗೆ ಏನಾದರೂ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇರುವುದರಿಂದ ಹೀಗೆ ಮಾಡಲಾಯಿತೆ?

ತುರ್ತುಪರಿಸ್ಥಿತಿಯ ಕುರಿತು ಪಶ್ಚಾತ್ತಾಪವೇ ಇಲ್ಲ:

ಕಾಂಗ್ರೆಸ್ (ಐ)ನ ಪ್ರಣಾಳಿಕೆಯಲ್ಲಿರುವ ಇನ್ನುಳಿದ ಪ್ರಮುಖ ಅಂಶಗಳಲ್ಲಿ ಮೊದಲನೆಯದಾಗಿ ತುರ್ತುಪರಿಸ್ಥಿತಿಯ ವೇಳೆ ಜನತೆಯ ಹಕ್ಕುಗಳಿಗೆ ಹಾನಿಯಾಗಿದೆಯೆನ್ನುವುದನ್ನು ಅದು ಒಪ್ಪಿಕೊಳ್ಳಲು ಸರ್ವಥಾ ಸಿದ್ಧವಿಲ್ಲ. ಈ ಕುರಿತು ವಿಷಾದವಾಗಲೀ ಪಶ್ಚಾತ್ತಾಪವಾಗಲೀ ಕ್ಷಮಾಯಾಚನೆಯಾಗಲೀ ಇಲ್ಲವೇ ಇಲ್ಲ. ವಿಷಮ ಪರಿಸ್ಥಿತಿ ಮತ್ತು ಜನತೆಯ ಹಕ್ಕುಗಳ ಮೇಲಾದ ಆಕ್ರಮಣವನ್ನು ಮೌನದಿಂದಲೇ ಸಮರ್ಥಿಸಿಕೊಳ್ಳಲಾಗಿದೆ. ಮೂಲಭೂತ ಹಕ್ಕುಗಳ ಕುರಿತು ಅಥವಾ ಅವುಗಳನ್ನು ಇನ್ನು ಮುಂದೆ ಕಸಿದುಕೊಳ್ಳುವುದಿಲ್ಲವೆಂಬ ಆಶ್ವಾಸನೆಯಾಗಲೀ ಪ್ರಣಾಳಿಕೆಯಲ್ಲಿಲ್ಲವೆನ್ನುವುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ವಿಷಮ ಪರಿಸ್ಥಿತಿಯನ್ನು ಮತ್ತೊಮ್ಮೆ ಹೇರುವುದಿಲ್ಲ ಅಥವಾ ಪ್ರತಿಬಂಧಕ ಸ್ಥಾನಬದ್ಧತೆಯನ್ನು ಮರಳಿ ತರಲಾಗುವುದಿಲ್ಲವೆಂದಾಗಲೀ, 'ಮೀಸಾ' ಕಾಯಿದೆಯನ್ನು ಮತ್ತೊಮ್ಮೆ ಅನುಷ್ಠಾನಕ್ಕೆ ತರಲಾಗುವುದಿಲ್ಲವೆಂದಾಗಲೀ ಯಾವುದೇ ಭರವಸೆ ನೀಡಲಾಗಿಲ್ಲ. ಅವಶ್ಯಕ ಸಾಮಗ್ರಿಗಳ ಅಕ್ರಮ ದಾಸ್ತಾನು ಮಾಡುವವರ ವಿರುದ್ಧ ಉಸ್ತುವಾರಿ ಸರಕಾರವು ಜಾರಿಗೊಳಿಸಿದ್ದ ಪ್ರತಿಬಂಧಕ ಸ್ಥಾನಬದ್ಧತಾ ಕಾಯ್ದೆಯನ್ನು ಕಾಂಗ್ರೆಸ್(ಐ) ಮುಖಂಡರು ಖಂಡಿಸಿದ್ದಾರೆ. ಆದರೆ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಈ ಕಾಯ್ದೆಯನ್ನು ತಾವು ತರುವುದಿಲ್ಲವೆಂದು ಅವರು ಎಲ್ಲೂ ಹೇಳಿಲ್ಲ.

42ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಉಳಿದಿರುವ ಅಂಶಗಳನ್ನು ರದ್ದುಪಡಿಸುವ ಬಗ್ಗೆಯೂ ಕಾಂಗ್ರೆ ಪ್ರಣಾಳಿಕೆ ಮೌನವಹಿಸಿದೆ. ಮೂಲಭೂತ ಹಕ್ಕುಗಳಿಗಿಂತ ಸಂವಿಧಾನದ ನಿರ್ದೇಶನ ಸೂತ್ರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿರುವುದನ್ನು ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಬಲ್ಲ ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಕಾಂಗ್ರೆಸ್ (ಐ) ಪ್ರಣಾಳಿಕೆ ಈ ಅಸ್ತ್ರವನ್ನು ತನ್ನ ಕೈಯಲ್ಲಿ ಉಳಿಸಿಕೊಳ್ಳಬಯಸಿದೆ. ಮೂಲಭೂತ ಹಕ್ಕುಗಳ ಬಗ್ಗೆ ಮೌನವಹಿಸುವ ಮೂಲಕ ಕಾಂಗ್ರೆ ಪ್ರಣಾಳಿಕೆ ವಿಷಮ ಪರಿಸ್ಥಿತಿಯಲ್ಲಿ ತಾನು ಮಾಡಿರುವ ಅತಿರೇಕಗಳನ್ನು ಸಮರ್ಥಿಸಿಕೊಂಡಿದೆ; ಮಾತ್ರವಲ್ಲ, ತಾನು ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಅದನ್ನೇ ಮುಂದುವರಿಸಲು ಜನತೆಯ ನಿರ್ದೇಶವನ್ನು ಬಯಸುತ್ತಿದೆ. ಇದಕ್ಕೆ 42ನೇ ತಿದ್ದುಪಡಿಯಲ್ಲಿ ರದ್ದಾಗದೇ ಉಳಿದಿರುವ ಅಂಶಗಳನ್ನು ಕಾರ್ಯಗತಗೊಳಿಸುವುದಕ್ಕಿಂತ ಹೆಚ್ಚೇನೂ ಬೇಕಾಗಲಾರದು.

ಪತ್ರಿಕೆಗಳು ಮತ್ತು ನ್ಯಾಯಾಂಗ:

ಪತ್ರಿಕಾ ಸ್ವಾತಂತ್ರ್ಯ ಮತ್ತು ನ್ಯಾಯಾಂಗದವಿಷಯವನ್ನು ಕಾಂಗ್ರೆಸ್ (ಐ) ಪ್ರಣಾಳಿಕೆ ಮರೆತಿಲ್ಲ. ಆದರೆ ಅದರ ದೃಷ್ಟಿಯಲ್ಲಿ ಈ ಎರಡೂ ಅಂಗಗಳಿಗೆ ಹೆಚ್ಚಿನ ಮಹತ್ವವಿರುವಂತೆ ಕಾಣುವುದಿಲ್ಲ. ಪತ್ರಿಕಾಸ್ವಾತಂತ್ರ್ಯಕ್ಕೆ ವನ್ಯಮೃಗರಕ್ಷಣೆ ಮತ್ತು ಬಡವರ ವಿಷಯಕ್ಕಿಂತ ತುಸು ಮೊದಲಿನ ಸ್ಥಾನವಷ್ಟೆ ದೊರೆತಿದೆ. ನ್ಯಾಯಾಂಗಕ್ಕಂತೂ ವನ್ಯಮೃಗರಕ್ಷಣೆ ಮತ್ತು ಪರಿಸರ ಸಂರಕ್ಷಣೆಯ ಅಧ್ಯಾಯದ ನಂತರದ ಸ್ಥಾನ ನೀಡಲಾಗಿದೆ. ಕಾಂಗ್ರೆಸ್ (ಐ) ಪತ್ರಿಕಾ ಸ್ವಾತಂತ್ರ್ಯಕ್ಕೆ ಬದ್ಧವಾಗಿದೆಯೆಂದೂ ಒತ್ತಿ ಹೇಳಲಾಗಿದೆಯಂತೆ! ಬಹುಶಃ ಪಶ್ಚಿಮ ಜರ್ಮನಿಯ ಇಂಜಿನ್ ಬಳಸಿ ಸಂಜಯಗಾಂಧಿ ಸ್ವದೇಶೀ ಕಾರನ್ನು ನಿರ್ಮಾಣ ಮಾಡುವುದು ಖಚಿತವೆಂದು ಹೇಳಿದಷ್ಟೇ ಇದನ್ನೂ ಒತ್ತಿ ಹೇಳಿರಬಹುದು. ಪತ್ರಿಕಾ ಸ್ವಾತಂತ್ರ್ಯದ ವಿಷಯದಲ್ಲಿ ಕಾಂಗ್ರೆಸ್ (ಐ) ಇಷ್ಟು ತಲೆಕೆಡಿಸಿಕೊಳ್ಳಲಾರಂಭಿಸಿದುದು ಎಂದಿನಿಂದ ಅಂತ ಯಾರಾದರೂ ಕೇಳಬಹುದು. ಇಂದಿರಾಗಾಂಧಿ ಸುಭದ್ರತೆ-ಅಂದರೆ ಬಂಡವಾಳಶಾಹಿಗಳಿಗೂ ಭೂಮಾಲಕರಿಗೂ ತುಂಬ ಪ್ರಿಯವಾಗಿರುವಂಥ ಸುಭದ್ರತೆಯನ್ನು ಈ ದೇಶದಲ್ಲಿ ಸ್ಥಾಪಿಸಬಲ್ಲ ಒಬ್ಬರೇ ಮುಂದಾಳುವೆಂದು ಈ ದೇಶದ ಹಿರಿಯ ಬಂಡವಾಳಶಾಹಿ ಪತ್ರಿಕೆಗಳು ಜಾಹೀರಾತು ಮಾಡಲಾರಂಭಿಸಿದಂದಿನಿಂದ ಕಾಂಗ್ರೆಸ್ (ಐ)ಗೆ ಪತ್ರಿಕಾ ಸ್ವಾತಂತ್ರ್ಯದ ಮೇಲೆ ಪ್ರೇಮ ಉಕ್ಕಿ ಹರಿಯಲಾರಂಭಿಸಿದೆ!

ಬ್ರಿಟಿಷ್ ರಾಜ್ಯ ತೊಲಗಿದ ಬಳಿಕ ಈ ದೇಶದಲ್ಲಿ ಪತ್ರಿಕಾರಂಗದ ಮೇಲೆ ತುರ್ತುಪರಿಸ್ಥಿತಿಯಲ್ಲಿ ನಡೆದಷ್ಟು ತೀವ್ರ ಪ್ರಮಾಣದ ಆಕ್ರಮಣ ಮತ್ತೆಂದೂ ನಡೆದಿರಲಿಲ್ಲ. ಹೀಗಿರುವಾಗ ಪತ್ರಿಕಾರಂಗದ ಸ್ವಾತಂತ್ರ್ಯವನ್ನು ಉಳಿಸಲಾಗುವುದೆಂದು ಕಾಂಗ್ರೆಸ್ (ಐ) ಹೇಳಿದರೆ ಅದನ್ನು ಯಾರಾದರೂ ನಂಬಲು ಸಾಧ್ಯವೇ? ದೊಡ್ಡ ಬಂಡವಾಳಗಾರರ ಪತ್ರಿಕೆಗಳಿಗೆ ನೀಡಲಾಗುತ್ತಿರುವ ಜಾಹೀರಾತು ಮತ್ತು ಅವುಗಳ ಲಾಭದಲ್ಲಿ ಏನೂ ಕಡಿತವುಂಟುಮಾಡಲಾಗುವುದಿಲ್ಲ ಮತ್ತು ದೊಡ್ಡ ಬಂಡವಾಳಗಾರರ ಹಿತದೃಷ್ಟಿಯಿಂದ ಇಂದಿರಾಗಾಂಧಿಯನ್ನು ಅಲ್ಪಸ್ವಲ್ಪ ಟೀಕಿಸಲು ಅವರಿಗಿರುವ ಹಕ್ಕನ್ನು ಕಸಿದುಕೊಳ್ಳಲಾಗುವುದಿಲ್ಲವೆಂದಷ್ಟೇ ಈ ಆಶ್ವಾಸನೆಯ ಅರ್ಥ. ನ್ಯಾಯಾಂಗದ ಸ್ವಾತಂತ್ರ್ಯದ ಪ್ರಶ್ನೆಯೂ ಇಷ್ಟೆ. ನ್ಯಾಯಾಂಗವು ಮುಕ್ತವಾಗಿರಬೇಕೆನ್ನುವುದು ಯಾಕಾಗಿ? ಜನರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಸಲುವಾಗಿಯೆ? ಸಂವಿಧಾನದ ಮೂಲ ಚೌಕಟ್ಟನ್ನು ಉಳಿಸಿಕೊಳ್ಳಲಿಕ್ಕಾಗಿಯೆ? ಊಂಹ್ಞೂಂ, ಇವುಗಳನ್ನು ಎಲ್ಲೂ ಹೇಳಲಾಗಿಲ್ಲ. ವಿಷಮ ಪರಿಸ್ಥಿತಿಯ ಕಾಲದಲ್ಲಿ ಇಂದಿರಾ ಸರಕಾರವು ನ್ಯಾಯಾಂಗವನ್ನು ಕಾರ್ಯಾಂಗದ ಕೈಗೊಂಬೆಯನ್ನಾಗಿ ಪರಿವರ್ತಿಸಿಕೊಂಡಿತ್ತು. ಆರಿಸಿ ತೆಗೆಯಲಾಗಿದ್ದ ಕೆಲವು 'ಜೀಹುಜೂರ್' ಗಳನ್ನು ಉನ್ನತ ಅಧಿಕಾರಗಳಿಗೇರಿಸಲಾಯಿತು. ಯಾವ ಪಕ್ಷದ ಅನುಯಾಯಿಗಳು ನ್ಯಾಯಾಧೀಶರಿಗೂ ಬೆದರಿಕೆಯೊಡ್ಡುತ್ತಿದ್ದಾರೋ ಮತ್ತು ವರಿಷ್ಠ ನ್ಯಾಯಾಲಯವೂ ಕೂಡಾ ಅಂಥವರ ಬೆದರಿಕೆಗಳಿಂದ ಮುಕ್ತವಾಗಿಲ್ಲವೋ ಇಂತಹ ರಾಜಕೀಯಪಕ್ಷವೊಂದು ನ್ಯಾಯಾಂಗದ ಸ್ವಾತಂತ್ರ್ಯದ ಬಗ್ಗೆ ಆಡುವ ಮಾತನ್ನು ಯಾರಾದರೂ ನಂಬಲು ಸಾಧ್ಯವೇ?

ಕಾಂಗ್ರೆಸ್ (ಐ) ಚುನಾವಣಾ ಪ್ರಣಾಳಿಕೆ ವಸ್ತುಶಃ ಇಂದಿರಾಗಾಂಧಿಯ ನಿರಂಕುಶಾಧಿಕಾರವನ್ನು ಬೆಂಬಲಿಸಬೇಕೆಂದೇ ಕೇಳುತ್ತಿದೆ; ಪ್ರಜಾಸತ್ತಾತ್ಮಕ ಸ್ವಾತಂತ್ರ್ಯವನ್ನು ರಕ್ಷಿಸುವ ನಟನೆಯನ್ನೂ ಅದು ಮಾಡುತ್ತಿಲ್ಲ.

ಅಧಿಕಾರದ ಕೇಂದ್ರೀಕರಣ:

ತನ್ನ ಸರ್ವಾಧಿಕಾರಿ ಪ್ರವೃತ್ತಿಗೆ ಅನುಗುಣವಾಗಿ ಈ ಪ್ರಣಾಳಿಕೆ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಮತ್ತು ಅಧಿಕಾರಗಳನ್ನು ನೀಡುವ ಅಗತ್ಯವನ್ನು ಕಡೆಗಣಿಸಿದೆ. ರಾಜ್ಯಗಳಿಗೆ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸುವ ಅಸ್ಪಷ್ಟ ಪ್ರಸ್ತಾಪನೆಯೊಂದನ್ನು ಮಾತ್ರ ಮಾಡಲಾಗಿದೆ. ರಾಜ್ಯ ಮತ್ತು ಕೇಂದ್ರಗಳ ನಡುವೆ ಸಾಕಷ್ಟು ಅಧಿಕಾರದ ಹಂಚುವಿಕೆಯು ಪ್ರಜಾಸತ್ತೆಯ ಬಲವರ್ಧನೆಗೆ ಅಗತ್ಯವೆಂಬುದನ್ನು ಪ್ರಜಾತಂತ್ರದಲ್ಲಿ ವಿಶ್ವಾಸವಿರುವ ಪ್ರತಿಯೊಬ್ಬರೂ ಒಪ್ಪಿಕೊಳ್ಳುತ್ತಾರೆ. ಆದರೆ ಕಾಂಗ್ರೆಸ್ (ಐ) ಇದನ್ನು ಒಪ್ಪುತ್ತಿಲ್ಲ: ಬದಲು, ಶಿಕ್ಷಣವನ್ನು ಕೇಂದ್ರ ಮತ್ತು ರಾಜ್ಯಗಳ ಜಂಟಿಯಾದಿಯಲ್ಲಿ ಸೇರ್ಪಡೆಗೊಳಿಸುವ ಸೂಚನೆಯ ಮೂಲಕ ಅದು ರಾಜ್ಯಗಳ ಅಧಿಕಾರವನ್ನು ಮತ್ತಷ್ಟು ಕಸಿದುಕೊಳ್ಳುವ ಆಶ್ವಾಸನೆಯಿತ್ತಿದೆ. ಮಾತಿನಲ್ಲಿ 'ವಿಕೇಂದ್ರೀಕರಣ' ಕಾರ್ಯದಲ್ಲಿ 'ಕೇಂದ್ರೀಕರಣ' ಇದೇ ಕಾಂಗ್ರೆಸ್ (ಐ)ನ ಉದ್ದೇಶವಾಗಿರುವಂತಿದೆ. ಈ ವರ್ತನೆಯು ದೇಶದ ಸಮಗ್ರತೆಗೆ ಭಂಗವುಂಟುಮಾಡುವುದಲ್ಲದೆ ಪ್ರತ್ಯೇಕತಾವಾದಕ್ಕೂ ದಾರಿಮಾಡಿಕೊಡುತ್ತದೆ. ಇಂದಿರಾಗಾಂಧಿಗೆ ಈ ಬಗ್ಗೆ ತುಸುವಾದರೂ ಕಾಳಜಿಯಿದೆಯೆ? ಸರ್ವಥಾ ಇಲ್ಲ. ಆಕೆಗೆ ಬೇಕಾಗಿರುವುದು ಕೇಂದ್ರಕ್ಕೆ ಹೆಚ್ಚಿನ ಅಧಿಕಾರ ಮತ್ತು ಕೇಂದ್ರದಲ್ಲೂ ಆಕೆಯ ಕೈಯಲ್ಲಿ ಎಲ್ಲಾ ಅಧಿಕಾರ ಅಷ್ಟೆ.

ಹರಿಜನಮತ್ತು ಅಲ್ಪಸಂಖ್ಯಾತರಿಗೆ ವಂಚನೆ:

ಪರಿಶಿಷ್ಟ ಜಾತಿಯ ಜನರಿಗಂತೂ

ಪ್ರಣಾಳಿಕೆಯು ತುಂಬಾ ಆಶ್ವಾಸನೆಗಳ ಸುರಿಮಳೆಗರೆಯಲಾಗಿದೆ. ಮುಸ್ಲಿಂ ಸಮಾಜದ ಕೆಲವರು ಸಂದರ್ಭಸಾಧಕ ಗೋಸುಂಬೆಗಳು ಇಂದಿರಾಗಾಂಧಿಯೆಂದರೆ ಆರೆಸ್ಸೆಸ್‌ನ ಹಾವಳಿಗಿದಿರಾಗಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಕಾಪಾಡಬಲ್ಲ ಏಕಮಾತ್ರ ರಕ್ಷಕಿಯೆಂದು ಆಕೆಯ ಕಾಲಿಗೆ ಬೀಳಲು ಸಿದ್ಧರಿರಬಹುದು. ಆದರೆ ಕಳೆದ ಮೂವತ್ತು ವರ್ಷಗಳ ಕಾಂಗ್ರೆಸ್ ಆಡಳಿತೆ ಮತ್ತು ಹತ್ತುವರ್ಷಗಳ ಇಂದಿರಾಆಡಳಿತೆಯಲ್ಲಿ ನಾವು ಕಂಡುಕೊಂಡದ್ದೇನು? ಈ ಬಗ್ಗೆ ಇಂದಿರಾಗಾಂಧಿ ಮತ್ತು ಆಕೆಗಿಂತ ಹಿಂದೆ ಆಳಿದವರು ನೀಡಿದ ಆಶ್ವಾಸನೆಗಳೆಲ್ಲ ನಿಷ್ಪ್ರಯೋಜಕವೆಂಬುದು ಎಂದೋ ರುಜುವಾತಾಗಿದೆ ಹರಿಜನರಿಗೂ ಅಲ್ಪಸಂಖ್ಯಾತರಿಗೂ ಪೋಲೀಸ್ ಇಲಾಖೆಯಲ್ಲೋ ಅಥವಾ ಸರಕಾರಿ ಹುದ್ದೆಗಳಲ್ಲೋ ಒಂದಿಷ್ಟು ಸ್ಥಾನಗಳನ್ನು ಮೀಸಲಾಗಿಟ್ಟ ಮಾತ್ರಕ್ಕೆ (ಕಾಂಗ್ರೆಸ್ (ಐ) ಪ್ರಣಾಳಿಕೆಯಲ್ಲಿ ಇದೇ ಆಶ್ವಾಸನೆ ನೀಡಲಾಗಿದೆ) ಈ ಸಮಸ್ಯೆಗಳು ತೀರ್ಮಾನವಾಗುವುದಿಲ್ಲ; ಅಲ್ಪಸಂಖ್ಯಾತರಿಗೆ ಅದರಿಂದಾಗಿ ರಕ್ಷಣೆಯೂ ಲಭಿಸುವುದಿಲ್ಲ. ಬ್ರಿಟಿಷ್ ಆಡಳಿತೆಯ ಕಾಲದಲ್ಲೂ ಕೆಳಗಿನ ಹಂತದ ಎಲ್ಲಾ ಹುದ್ದೆಗಳಲ್ಲೂ ಭಾರತೀಯ ನೌಕರರೇ ಇದ್ದರು; ಮೇಲಿನ ಹಂತದ ಅಧಿಕಾರ ವರ್ಗದಲ್ಲೂ ಹಲವಾರು ಭಾರತೀಯರಿದ್ದರು. ಆದರೂ ಭಾರತೀಯರ ಮೇಲಿನ ದಬ್ಬಾಳಿಕೆ ಅವ್ಯಾಹತವಾಗಿ ನಡೆಯುತ್ತಲೇ ಇತ್ತು. ಹರಿಜನರನ್ನೂ ಮುಸ್ಲಿಮರನ್ನೂ ಹತ್ತಿಕ್ಕಲು ಪೋಲೀಸ್ ಇಲಾಖೆಯಲ್ಲಿ ಸೇರಿಕೊಂಡ ಹರಿಜನರು ಮತ್ತು ಮುಸ್ಲಿಮರನ್ನೇ ಬಳಸಲಾಗುವುದು. ಈ ಮೂಲಕ ಸರಕಾರವು ನಿಷ್ಪಕ್ಷಪಾತವಾಗಿದೆಯೆಂಬ ಪ್ರಮಾಣ ಪತ್ರವನ್ನೂ ಅದು ಪಡೆಯಬಹುದು.

ಹರಿಜನರನ್ನೂ ಅಲ್ಪಸಂಖ್ಯಾತರನ್ನೂ ವಂಚಿಸಲು ಕಾಂಗ್ರೆಸ್ (ಐ) ಪ್ರಣಾಳಿಕೆ ಈ ಹಳೆಯ ಆಶ್ವಾಸನೆಗಳನ್ನೇ ಮತ್ತೆ ನೀಡಿದೆ. ಕಳೆದ ಮೂರು ದಶಕಗಳ ಕಾಂಗ್ರೆಸ್ ಆಡಳಿತೆಯಲ್ಲಿ ಹರಿಜನರ ಮತ್ತು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ ಯಾಕೆ ನಿಲ್ಲಲಿಲ್ಲವೆಂದು ಅದು ಹೇಳಿಲ್ಲ. ಕಾಂಗ್ರೆಸ್ (ಐ) ಗಾಂಧೀ ಮತ್ತು ನೆಹರೂ ಅವರ ತತ್ವಗಳಿಗೆ ಬದ್ಧನಾಗಿದ್ದೇನೆಂದೂ ಹೇಳಿಕೊಂಡಿದೆ. ಗಾಂಧೀ ಆಗಲಿ, ನೆಹರೂ ಆಗಲಿ ಈ ದೇಶದ ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ಹರಿಜನರನ್ನು ಸಂರಕ್ಷಿಸಲು ಸಮರ್ಥರಾಗಿರಲಿಲ್ಲ. ಇದಕ್ಕೆ ಬೇರೆಯೇ ದೃಷ್ಟಿಕೋನ ಬೇಕಾಗಿದೆ. ಆದರೆ ಕಾಂಗ್ರೆಸ್ (ಐ) ಹಳೆಯ ಜಾಡಿನಲ್ಲೇ ಮತ್ತೆ ಸಾಗಬಯಸಿದೆ.

ಕಾಂಗ್ರೆಸ್ (ಐ) ಆಡಳಿತೆಯಲ್ಲಿ ನಡೆದುದೇನು ? :

ಕಾಂಗ್ರೆಸ್ (ಐ) ಇಂತಹ ಆಶ್ವಾಸನೆಗಳನ್ನು ನೀಡುತ್ತಿರುವ ಕಾಲದಲ್ಲೇ ಆಂಧ್ರಪ್ರದೇಶದಲ್ಲಿರುವ ಅದರ ಸರಕಾರ ಏನು ಮಾಡುತ್ತಿದೆಯೆಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಆಂಧ್ರಪ್ರದೇಶದಲ್ಲಿ ಹರಿಜನರ ಮೇಲಿನ ದೌರ್ಜನ್ಯ ಕೊನೆಗೊಳ್ಳದಿರುವುದು ಮಾತ್ರವೇ ಅಲ್ಲ ಅವು ದಿನೇದಿನೇ ಹೆಚ್ಚುತ್ತಿಲ್ಲವೆ? ಕಾಂಗ್ರೆಸ್ (ಐ) ಗೆ ಹರಿಜನರ ನೆನಪಾಗುವುದು ಚುನಾವಣೆಗಳ ಕಾಲಕ್ಕೆ ಮಾತ್ರ ಏನು ?

ಆಂಧ್ರಪ್ರದೇಶದ ಮುಸ್ಲಿಂ ಅಲ್ಪಸಂಖ್ಯಾತರ ಬವಣೆ ಹೇಗಿದೆ? ಹೈದ್ರಾಬಾದ್ ಪೋಲೀಸ್ ಠಾಣೆಯಲ್ಲಿ ಅತ್ಯಾಚಾರಕ್ಕೊಳಗಾದ ಮುಸ್ಲಿಂ ಮಹಿಳೆ ರಮೀಜಾಬಿಯ ಮೇಲೆ ನಡೆದ ಭೀಕರ ದೌರ್ಜನ್ಯವನ್ನು ಜನ ಮರೆತಿದ್ದಾರೆಯೆ? ರಮೀಜಾಬಿಯೊಬ್ಬಳು ಸಾಮಾನ್ಯ ವೇಶ್ಯೆ ಎನ್ನುವ ಮೂಲಕ ಈ ದುಷ್ಕೃತ್ಯವನ್ನು ಆಂಧ್ರಪ್ರದೇಶದ ಲಜ್ಜೆಗೇಡಿ ಮಂತ್ರಿಯೊಬ್ಬ ಸಮರ್ಥಿಸಿಕೊಳ್ಳಲು ಯತ್ನಿಸಿದುದನ್ನು ಜನ ಇನ್ನೂ ಮರೆತಿಲ್ಲ. (ಈ ಹೆಂಗಸಿನ ಗಂಡನನ್ನು ಪೋಲೀಸರು ಕೊಲೆಗೈದಿದ್ದಾರೆ. ಪೋಲೀಸರ ಹೊಡೆತಗಳಿಂದ ಆತ ಸತ್ತಿದ್ದಾನೆ. ಈ ಮಹಿಳೆ ಬಸ್ಸಿಗಾಗಿ ಕಾಯುತ್ತಿದ್ದಾಗ ಆಕೆಯನ್ನು ಹಾರಿಸಿಕೊಂಡು ಹೋಗಿ ಅತ್ಯಾಚಾರ ವೆಸಗಲಾಗಿತ್ತು). ಇವೆಲ್ಲಕ್ಕಿಂತ ಹೆಚ್ಚಾಗಿ ಈ ಆರೋಪದಿಂದ ಪೋಲೀಸರನ್ನು ಬಚಾಯಿಸಲು ಸಾಕ್ಷಿಗಳ ಮೇಲೆ ಮಂತ್ರಿಗಳೂ ಪ್ರಭಾವಬೀರಲು ಪ್ರಯತ್ನಿಸಿದ್ದರು. ಇದೇ ರೀತಿ ಇತ್ತೀಚೆಗೆ ಇನ್ನೊಬ್ಬ ಮಹಿಳೆಯ ಮೇಲೂ ದೌರ್ಜನ್ಯವೆಸಗಲಾಗಿದೆ ಇಷ್ಟೆಲ್ಲ ನಡೆದ ಮೇಲೂ ಕಾಂಗ್ರೆಸ್ (ಐ) ಮುಸ್ಲಿಮರ ಹಿತರಕ್ಷಣೆ ಮಾಡುವ ಭರವಸೆ ನೀಡುತ್ತಿದೆ! ಪರಿಶಿಷ್ಟವರ್ಗ ಮತ್ತು ಅಲ್ಪಸಂಖ್ಯಾತರ ನಡುವೆ ಇರಬಹುದಾದ ವಿಶ್ವಾಸಘಾತಕರನ್ನು ಬಿಟ್ಟರೆ ಬೇರೆ ಯಾರೂ ಈ ಭರವಸೆಗಳನ್ನು ನಂಬಿ ಕಾಂಗ್ರೆಸ್ (ಐ)ಗೆ ಮತ ನೀಡಬೇಕೆಂದು ಕೇಳಲಾರರು.

ಗುತ್ತೇದಾರಿಗಳು ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಉತ್ತೇಜನ:

ಇನ್ನು ಕಾಂಗ್ರೆಸ್ (ಐ) ಪ್ರಣಾಳಿಕೆಯಲ್ಲಿ ಕಾಣಿಸಲಾದ ಆರ್ಥಿಕ ನೀತಿಯ ಬಗ್ಗೆ ನೋಡೋಣ. ಗುತ್ತೇದಾರಿ ಸಂಸ್ಥೆಗಳ ಕುರಿತು ಕೇವಲ ನಾಲ್ಕು ವಾಕ್ಯಗಳನ್ನು ಮಾತ್ರ ಬರೆಯಲಾಗಿದೆ. ಕಾಂಗ್ರೆಸ್ (ಐ) ಏಕಸ್ವಾಮ್ಯ ಸಂಸ್ಥೆಗಳ ಬೆಳವಣಿಗೆಯನ್ನು ತಡೆಯಬಯಸುತ್ತದೆ ಹೊರತು ಅವುಗಳನ್ನು ನಿವಾರಿಸಲು ಬಯಸುತ್ತಿಲ್ಲ. ಹಾಗಾಗಿ ಕಾಂಗ್ರೆಸ್ (ಐ) ಅಧಿಪತ್ಯದಲ್ಲಿ ಅವು ಖಂಡಿತ ಬೆಳೆಯಲಿವೆ. ಇತ್ತೀಚಿನ ವರ್ಷಗಳಲ್ಲಿ ಟಾಟಾ ಮತ್ತುಬಿರ್ಲಾರ ಸಂಪತ್ತು ಇಮ್ಮಡಿಗಿಂತಲೂ ಹೆಚ್ಚಾಗಿರುವುದಕ್ಕೆ ಕಾರಣವೇನೆಂದು ವಿವರಿಸಲಾಗಿಲ್ಲ. ಈ ಬಗ್ಗೆ ಯಾವುದೇ ಕಳವಳವನ್ನೂ ವ್ಯಕ್ತಪಡಿಸಲಾಗಿಲ್ಲ. ಏಕಸ್ವಾಮ್ಯವಾದಿಗಳ ಬೆಳವಣಿಗೆಯನ್ನು ಪ್ರಾಮಾಣಿಕವಾಗಿ ತಡೆಯಬಯಸುವ ಯಾವುದೇ ಸಂಘಟನೆಯಾದರೂ ತನ್ನ ಹಿಂದಿನ ನೀತಿಯನ್ನು ಗಂಭಿರ ವಿಮರ್ಶೆಗೊಳಪಡಿಸಬೇಕಾಗುತ್ತದೆ. ಕಾಂಗ್ರೆಸ್ (ಐ) ಹೀಗೆ ಮಾಡಲು ತಯಾರಿಲ್ಲ. ಏಕಸ್ವಾಮ್ಯವಾದಿ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿದರೆ ಅವುಗಳ ಶಕ್ತಿಯ ಮೇಲೆ ನಿಯಂತ್ರಣ ಸಾಧ್ಯವೆಂಬ ಸೂಚನೆಯನ್ನಾದರೂ ಪ್ರಣಾಳಿಕೆಯಲ್ಲಿ ಕೊಡಲಾಗಿಲ್ಲ. ಇಂದಿರಾ ಗಾಂಧಿಗೆ ಬೆಂಬಲವಾಗಿರುವವರು ಏಕಸ್ವಾಮ್ಯವಾದಿಗಳೇ ಆಗಿರುವಾಗ ಈ ರೀತಿ ಹೇಳಲು ಸಾಧ್ಯವೆ?

ಬಹುರಾಷ್ಟ್ರೀಯ ಸಂಸ್ಥೆಗಳ ಕುರಿತಾದ ಪ್ರಸ್ತಾಪವನ್ನೂ ಕೇವಲ ಹತ್ತು ವಾಕ್ಯಗಳಲ್ಲಿ ಮುಗಿಸಿಬಿಡಲಾಗಿದೆ. ದೇಶದೊಳಗೆ ಬಹುರಾಷ್ಟ್ರೀಯ ಸಂಸ್ಥೆಗಳ ಪ್ರವೇಶವನ್ನು ನಿಯಂತ್ರಿಸುವ ವಿಷಯದಲ್ಲಾಗಲೀ ದೇಶ ಮತ್ತು ಜನತೆಯನ್ನು ಅವು ಶೋಷಿಸುತ್ತಿರುವುದನ್ನು ತಡೆಗಟ್ಟುವ ಬಗೆಗಾಗಲೀ ಏನೂ ಹೇಳಲಾಗಿಲ್ಲ. ಬಹುರಾಷ್ಟ್ರೀಯ ಸಂಸ್ಥೆಗಳ ಚಟುವಟಿಕೆಗಳು ದೇಶದ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಗೆ ಅಪಾಯವೊಡ್ಡುತ್ತಿವೆಯೆಂಬ ಎಚ್ಚರಿಕೆಯೂ ಇಲ್ಲಿಲ್ಲ. ಇದು ತೀರಾ ಸಹಜ. ಏಕೆಂದರೆ ವಿಶ್ವಬ್ಯಾಂಕಿನ ನೆರವಿನ ಮೇಲೆ ಬಹಳಷ್ಟು ಆಧರಿಸಿಕೊಂಡಿದ್ದ ಕಾಂಗ್ರೆಸ್ ಸರಕಾರಗಳು ಹೆಚ್ಚುಹೆಚ್ಚು ಬಹುರಾಷ್ಟ್ರೀಯ ಸಂಸ್ಥೆಗಳನ್ನು ಸ್ವಾಗತಿಸಲೇಬೇಕಾಗಿತ್ತು. ಅವುಗಳನ್ನು ತಡೆಯುವಷ್ಟು ಸಾಮರ್ಥ್ಯ ಸರಕಾರಕ್ಕಿರಲಿಲ್ಲ. ಬಹುರಾಷ್ಟ್ರೀಯ ಔಷಧಿ ಕಂಪೆನಿಗಳು ಈ ರಾಷ್ಟ್ರದ ಜನತೆಯನ್ನು ಶೋಷಿಸಿವೆ; ಸರಕಾರದ ನಿರ್ದೇಶಗಳನ್ನು ಉಲ್ಲಂಘಿಸಿವೆ ಮತ್ತು ನೌಕರರನ್ನು ಪೀಡಿಸಿವೆ. ಆದರೂ ಕಾಂಗ್ರೆಸ್ ಸರಕಾರಗಳು ಅವುಗಳಿಗೆ ಸದಾಕಾಲ ಉತ್ತೇಜನ ನೀಡಿವೆ. ಬಹುರಾಷ್ಟ್ರೀಯ ಔಷಧಿ ತಯಾರಕ ಸಂಸ್ಥೆಗಳ ಬಗ್ಗೆ ಹಾಥಿಸಮಿತಿ ನೀಡಿದ್ದ ವರದಿಯನ್ನು ಇಂದಿರಾ ಸರಕಾರವು ಮೂಲೆಗುಂಪು ಮಾಡಿದೆ. ಡಾಂಗೆಯ 'ದೇಶಪ್ರೇಮಿ ರಾಷ್ಟ್ರೀಯ ಬಂಡವಾಳಶಾಹಿಗಳು' ಬಹುರಾಷ್ಟ್ರೀಯ ಸಂಸ್ಥೆಗಳನ್ನು ಓಲೈಸುತ್ತಿದ್ದಾರೆ; ವಿರೋಧಿಸುತ್ತಿಲ್ಲ! ವಿದೇಶೀ ಖಾಸಗಿ ಬಂಡವಾಳವನ್ನು ಇನ್ನೂ ಹೆಚ್ಚಾಗಿ ಬಳಸಿಕೊಳ್ಳಬೇಕೆಂದು ವಿಶ್ವಬ್ಯಾಂಕ್ ಭಾರತವನ್ನು ಮೇಲಿಂದ ಮೇಲೆ ಒತ್ತಾಯಿಸುತ್ತಿದೆ. ಇಂದಿರಾ ಸರಕಾರ ಮತ್ತು ಆಮೇಲೆ ಬಂದ ಜನತಾ ಸರಕಾರ ಕೂಡಾ ಈ ಒತ್ತಾಯಕ್ಕೆ ಮಣಿದು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶವನ್ನು ಪ್ರವೇಶಿಸಲು ಮುಕ್ತ ಅವಕಾಶವೊದಗಿಸಿವೆ. ಬಂಡವಾಳಶಾಹಿಯ ಬಾಡಿಗೆಯ ಅರ್ಥಶಾಸ್ತ್ರಜ್ಞರು ಮಾತ್ರ ಬಹುರಾಷ್ಟ್ರೀಯ ಸಂಸ್ಥೆಗಳ ಚಟುವಟಿಕೆಗಳಿಂದ ದೇಶಕ್ಕೆ ಒಳಿತಾಗಿದೆ, ಅವು ಉದ್ಯೋಗಾವಕಾಶವನ್ನು ನಿರ್ಮಿಸಿವೆ ಮತ್ತು ಪೂರಕ ಕೈಗಾರಿಕೆಗಳನ್ನು ಬೆಳೆಸುತ್ತಿವೆಯೆನ್ನುತ್ತಿದ್ದಾರೆ. ಕಾಂಗ್ರೆಸ್ (ಐ) ಪ್ರಣಾಳಿಕೆ ತನ್ನ ಈ ಹಿಂದಿನ ನಿಲುಮೆಗನುಗುಣವಾಗಿ ಬಹುರಾಷ್ಟ್ರೀಯ ಸಂಸ್ಥೆಗಳ ಕುರಿತು ನಾಲ್ಕಾರು ಮಾತುಗಳನ್ನು ಮಾತ್ರ ಹೇಳಿದೆ. ಈ ಸಂಸ್ಥೆಗಳಿಗೆ ತಮ್ಮ ಚಟುವಟಿಕೆಗಳನ್ನು ಬೆಳೆಸಿಕೊಳ್ಳುವಲ್ಲಿ ಯಾವುದೇ ಅಡಚಣೆ ಉಂಟುಮಾಡಲಾಗುವುದಿಲ್ಲವೆಂದೇ ಇದರ ಅರ್ಥ.

ಪ್ರಣಾಳಿಕೆಯಲ್ಲೆಲ್ಲ ತುಂಬಾ ಜೋರಾಗಿರುವ ಅಂಶವೆಂದರೆ ಅದರ ಮುಚ್ಚುಮರೆಯಿಲ್ಲದ ಕಾರ್ಮಿಕ ವಿರೋಧಿ ಮತ್ತು ನೌಕರ ವಿರೋಧಿ ನಿಲುಮೆ.

ಕಾರ್ಮಿಕ ವರ್ಗದ ವಿರೋಧಿ :

ಕಾರ್ಮಿಕರ ಮೇಲಿನ ಅಧ್ಯಾಯ ಕೇವಲ ಏಳು ವಾಕ್ಯಗಳಿಗೆ ಮುಕ್ತಾಯಗೊಂಡಿದೆ. ಕುಖ್ಯಾತ ಇಪ್ಪತ್ತಂಶ ಕಾರ್ಯಕ್ರಮದಲ್ಲಿ ಹೇಳಲಾಗಿರುವುದನ್ನೇ ಇದರಲ್ಲಿ ಅಕ್ಷರಶಃ ಅನುಸರಿಸಲಾಗಿದೆ. "ಕಾಂಗ್ರೆಸ್ಸಿನ ಮಹತ್ತಮ ಉದ್ದೇಶಗಳಲ್ಲಿ ಕೈಗಾರಿಕೆಗಳಲ್ಲಿ ಕಾರ್ಮಿಕರ ಭಾಗವಹಿಸುವಿಕೆಯೂ ಒಂದು. ಉತ್ಪಾದನೆ ಮತ್ತು ಆಡಳಿತೆಯ ಕ್ರಿಯೆಯಲ್ಲಿ ಕಾರ್ಮಿಕರ ಪಾಲುದಾರಿಕೆ ಬಹುಮುಖ್ಯವಾದುದೆಂದು ನಾವು ಭಾವಿಸುತ್ತೇವೆ ಇಂತಹ ಭಾಗವಹಿಸುವಿಕೆ ಕ್ರಮೇಣ ವಿಸ್ತರಣಗೊಳ್ಳಲಿದೆ ಮತ್ತು ಸರಕಾರಿ ಉದ್ಯಮಗಳು ಈ ನಿಟ್ಟಿನಲ್ಲಿ ಪರಿಣಾಮಕಾರಿ ಮುಂದಾಳುತ್ವ ನೀಡಲಿದೆ. ಕಾರ್ಮಿಕರ ಕಲ್ಯಾಣ ಮತ್ತು ಹಿತರಕ್ಷಣೆ. ಸಾಮಾಜಿಕ ನ್ಯಾಯವಿತರಣೆಯ ಮುಖ್ಯಮಾನದಂಡವೆಂದು ಸದಾಕಾಲ ಪರಿಗಣಿಸಲಾಗುವುದು".

ಇಂದು ಮುಷ್ಕರಗಳ ಹೆದ್ದೆರೆಗಳು ದೇಶವನ್ನು ಅಲುಗಿಸುತ್ತಿವೆ. ಕಳೆದ ವರ್ಷವೊಂದರಲ್ಲೇ ಮಿಲಿಯಗಟ್ಟಲೆ ದುಡಿಮೆಯ ದಿನಗಳು ನಷ್ಟವಾಗಿವೆ. ಇದಕ್ಕೆಲ್ಲಾ ಕಾರ್ಮಿಕರು ಆಡಳಿತದಲ್ಲಿ ಭಾಗವಹಿಸದಿದ್ದುದೇ ಕಾರಣ ಹೊರತು ಬೇರೇನೂ ಅಲ್ಲವೆಂದು ಕಾಂಗ್ರೆಸ್ (ಐ) ಹೇಳುತ್ತಿದೆ. ಪಕ್ಷದ ಮಿತಿಮೀರಿದ ಆತ್ಮವಂಚಕ ಪ್ರವೃತ್ತಿಗೆ ಇದೊಂದು ದೃಷ್ಟಾಂತ; ಬಹುಶಃ ಆತ್ಮವಂಚಕ ಪ್ರವೃತ್ತಿಯಲ್ಲಿ ಇಂದಿರಾಗಾಂಧಿಯನ್ನೂ ಆಕೆಯ ಪಕ್ಷವನ್ನೂ ಮೀರಿಸುವವರಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ದುಡಿಯುವ ಜನತೆಯ ಕುರಿತು ಯಾವುದೇ ಪ್ರಸ್ತಾಪ ಮಾಡದಿರಲು ಸಾಧ್ಯವಿಲ್ಲ. ಕಾಂಗ್ರೆಸ್ (ಐ) ಪ್ರಣಾಳಿಕೆ ಅಸಂಗತ ಪ್ರಶ್ನೆಗಳನ್ನೆತ್ತಿಕೊಂಡು ಅವುಗಳ ಮರೆಯಲ್ಲಿ, ಕಾರ್ಮಿಕರೂ, ನೌಕರರೂ ಯಾವ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸುತ್ತಿದ್ದಾರೋ ಅವುಗಳನ್ನು ಅಲ್ಲಗಳೆಯಲು ಪ್ರಯತ್ನಿಸುತ್ತಿದೆ. ಇದು ದುಡಿಯುವ ಜನತೆಯ ಬೇಡಿಕೆಗಳನ್ನು ತುರ್ತುಪರಿಸ್ಥಿತಿಯ ಕಾಲದಲ್ಲಿ ಮಾಡಿದಂತೆ ಕ್ರೂರವಾಗಿ ಹತ್ತಿಕ್ಕಲಾಗುವುದೆಂದು ದೊಡ್ಡ ಬಂಡವಾಳಶಾಹಿಗಳಿಗೆ ಕಾಂಗ್ರೆಸ್ (ಐ) ಕೊಡುತ್ತಿರುವ ಭರವಸೆ.

ಆದಕಾರಣ ಅವಶ್ಯಕತೆ ಆಧಾರಿತ ವೇತನದ ಪ್ರಸ್ತಾಪ ಇಲ್ಲಿಲ್ಲ. ಏರುತ್ತಿರುವ ಜೀವನವೆಚ್ಚಕ್ಕೆ ತುಟ್ಟಿಭತ್ತೆಯ ಮೂಲಕ ಪೂರ್ಣ ಪರಿಹಾರ ಒದಗಿಸುವ ಆಶ್ವಾಸನೆಯೂ ಇಲ್ಲ. 'ಬೋನಸ್' 'ಮುಂದೂಡಲ್ಪಟ್ಟ ವೇತನ' ಎಂಬ ತತ್ವವನ್ನು ಮರೆತುಬಿಡಲಾಗಿದೆ; ಮಾತ್ರವಲ್ಲ ಬೋನಸ್ ಬಗ್ಗೆ ಏನೂ ಹೇಳದಿರುವ ಮೂಲಕ ಬೋನಸ್ ಪ್ರಶ್ನೆಯನ್ನು ಸಂಪೂರ್ಣವಾಗಿ ಅಲ್ಲಗಳೆಯಲಾಗಿದೆ. ಎರಡನೆಯದಾಗಿ ನಿರುದ್ಯೋಗ ಪರಿಹಾರದ ಬಗ್ಗೆ ಏನೂ ಹೇಳಲಾಗಿಲ್ಲ ಕಾರ್ಮಿಕ ಹಕ್ಕುಗಳ ವಿಚಾರವಂತೂ ಇಲ್ಲವೇ ಇಲ್ಲ. ಮತದಾನದ ಮೂಲಕ ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ ನೀಡುವ, ಸಂಘಟಿತ ಕಾರ್ಮಿಕ ವರ್ಗದ ಬೇಡಿಕೆಯನ್ನು ಸೂಚ್ಯವಾಗಿ ತಿರಸ್ಕರಿಸಿಬಿಡಲಾಗಿದೆ. ಇದರ ಬದಲಾಗಿ ತನಗಿಷ್ಟ ಬಂದವರಿಗೂ, ತನ್ನ ಚೇಲಾಗಳಿಗೂ ಅಂಗೀಕಾರ ನೀಡುವ ಕ್ರಮದ ಬಗ್ಗೆ ಕಾಂಗ್ರೆಸ್ (ಐ) ತನ್ನ ಒಲವನ್ನು ಒತ್ತಿಹೇಳಿದೆ. ಕಡ್ಡಾಯ ಠೇವಣಿ ಯೋಜನೆಯನ್ನು ಮತ್ತೆ ಆರಂಭಿಸುವುದಿಲ್ಲವೆಂಬ ಆಶ್ವಾಸನೆ ಎಲ್ಲೂ ಕಾಣುತ್ತಿಲ್ಲ.

ದಮನ ಕಾರ್ಯ ಮುಂದುವರಿಯಲಿದೆ :

ಇದು ವಿಷಮ ಪರಿಸ್ಥಿತಿಯ ಕಾಲದ ನೌಕರ ವಿರೋಧಿ, ಕಾರ್ಮಿಕ ವಿರೋಧಿ ಕಾರ್ಯಕ್ರಮದ ಪುನರಾವತಾರವಲ್ಲದೆ ಬೇರೇನೂ ಅಲ್ಲ. ಯೋಜನಾ ಆಯೋಗದಿಂದ 'ಹೆಚ್ಚು ವೇತನ ಪಡೆಯುವ ದ್ವೀಪ'ಗಳೆಂದು ವರ್ಣಿಸಲ್ಪಟ್ಟಿರುವ ಕಾರ್ಮಿಕರನ್ನು, ನೌಕರರನ್ನು ಮಟ್ಟಹಾಕಲು ಕಾಂಗ್ರೆಸ್ (ಐ) ಜನತೆಯ ಸಮ್ಮತಿಯನ್ನು ಪಡೆಯಬಯಸಿದೆ. ಶಿಕ್ಷಕರನ್ನು ಹೊರತುಪಡಿಸಿ ಬೇರೆ ಯಾವ ನೌಕರವರ್ಗದ ಅಸ್ತಿತ್ವವನ್ನೂ ಕಾಂಗ್ರೆಸ್ (ಐ) ಪ್ರಣಾಳಿಕೆ ಒಪ್ಪಿಕೊಂಡ ಹಾಗೆ ಕಾಣುತ್ತಿಲ್ಲ. ಶಿಕ್ಷಕರ ವಿಷಯದಲ್ಲೂ ಅವರ ವೇತನಗಳ ಬಗ್ಗೆ ಪರಾಮರ್ಶೆ ನಡೆಸಲು ರಾಷ್ಟ್ರೀಯ ಆಯೋಗವೊಂದನ್ನು ರಚಿಸುವ ಭರವಸೆಯನ್ನು ಮಾತ್ರ ನೀಡಲಾಗಿದೆ.

ಟ್ರೇಡ್ ಯೂನಿಯನ್ ಹಕ್ಕುಗಳ ವಿಸ್ತರಣೆಯನ್ನಾಗಲೀ, ಪೋಲೀಸ್ ದಬ್ಬಾಳಿಕೆಯ ವಿರುದ್ಧ ರಕ್ಷಣೆಯನ್ನಾಗಲೀ ನೀಡುವ ಗೋಜಿಗೆ ಕಾಂಗ್ರೆ ಪ್ರಣಾಳಿಕೆ ಹೋಗಿಲ್ಲ. ಕಾರ್ಮಿಕರು ಮತ್ತು ನೌಕರರ ಮೇಲೆ ದಬ್ಬಾಳಿಕೆಯನ್ನು ಮುಂದುವರಿಸುವ ಮತ್ತು ಅದನ್ನು ತೀವ್ರಗೊಳಿಸುವ ಆಶ್ವಾಸನೆಯನ್ನು ಮಾತ್ರ ಅದು ನೀಡುತ್ತಿದೆ. ಕಾರ್ಮಿಕರ ಸ್ವಾತಂತ್ರ್ಯವನ್ನು ಮೊಟಕುಗೊಳಿಸಬೇಕೆನ್ನುವುದು ಬಹುರಾಷ್ಟ್ರೀಯ ಸಂಸ್ಥೆಗಳ ಹೇಳಿಕೆಯೆನ್ನುವುದನ್ನೂ ನೆನಪಿಡಬೇಕು. ಹಾಗೆಯೇ ಕಾರ್ಮಿಕರಿಗೆ ಇನ್ನೂ ಹೆಚ್ಚಿನ ಆರ್ಥಿಕ ಸವಲತ್ತು ನೀಡುವುದನ್ನೂ ತಡೆಹಿಡಿಯಬೇಕೆಂದು ಜಾಗತಿಕ ಬ್ಯಾಂಕ್ ಒತ್ತಾಯಿಸುತ್ತಿದೆ. ಡಾಂಗೆ ಅವರ 'ದೇಶಪ್ರೇಮಿ ರಾಷ್ಟ್ರೀಯ ಬೂರ್ಶ್ವಾಸಿ'ಯ ಮುಂದಾಳು ಇಂದಿರಾಗಾಂಧಿ ಇವುಗಳೆರಡರ ತಾಳಕ್ಕೆ ಸರಿಯಾಗಿ ಕುಣಿಯುತ್ತಿದ್ದಾರೆ: ರಾಷ್ಟ್ರಪ್ರೇಮಕ್ಕೆ ಬಹುಶಃ ಇದೊಂದು ಹೊಸ ಉದಾಹರಣೆ!

ಕೊನೆಯದಾಗಿ ಆಡಳಿತೆಯಲ್ಲಿ ಕಾರ್ಮಿಕರ ಸಹಭಾಗಿತ್ವವೆಂದರೇನೆಂದು ಯಾರಾದರೂ ಕೇಳಬಹುದು. ಕಾಂಗ್ರೆಸ್ (ಐ) ಪಕ್ಷವು ತುಂಬಾ ಪುರೋಗಾಮಿಯೆಂದು ವಿದೇಶಗಳಲ್ಲಿ ತೋರಿಸಿಕೊಳ್ಳಲು ಅದು ಅಂತರಾಷ್ಟ್ರೀಯ ಕಾರ್ಮಿಕ ಸಂಘ (ILO) ನೀಡಿದ ಕೆಲವು ಸಲಹೆಗಳನ್ನು ಗಿಳಿಯಂತೆ ಉಚ್ಚರಿಸುತ್ತಿದೆ ಅಷ್ಟೆ. ಇದನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಆಡಳಿತದಲ್ಲಿ ಪಾಲುದಾರರಾಗಲು ನಮ್ಮ ಕಾರ್ಮಿಕವರ್ಗ ಸಿದ್ಧವಿದೆ. ಆದರೆ ಒಂದು ಶರ್ತದ ಮೇಲೆ

ಮಾತ್ರ. ಈ ಭಾಗವಹಿಸುವಿಕೆ ಸಮಾನತೆಯ ಆಧಾರದಲ್ಲಿರಬೇಕು ಅಂದರೆ ಕಾರ್ಮಿಕ ಚಳುವಳಿಯ ಪ್ರತಿನಿಧಿಗಳಿಗೆ ಹಣಕಾಸು ಮತ್ತಿತರ ವಿಷಯಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು ಮುಕ್ತ ಅವಕಾಶ ನೀಡಬೇಕು ಮತ್ತು ಸಮಾನ ಪ್ರಾತಿನಿಧ್ಯವೂ ಸಿಗಬೇಕು. ಇದಕ್ಕೆ ಇಂದಿರಾ ಸರಕಾರವಾಗಲೀ ಆಡಳಿತವರ್ಗಗಳಾಗಲೀ ಎಂದೂ ಸಮ್ಮತಿ ನೀಡಿರಲಿಲ್ಲ. ಇಂದಿರಾ ಸರಕಾರದ ದೃಷ್ಟಿಯಲ್ಲಿ ಕಾರ್ಮಿಕರ ಸಹಭಾಗಿತ್ವವೆಂದರೆ ಶ್ರಮಭಾರವನ್ನು ಹೆಚ್ಚಿಸುವ ಬಗೆ ಹೇಗೆ ಮತ್ತು ದುಡಿಮೆಯ ತೀವ್ರತೆಯನ್ನು ಹೆಚ್ಚಿಸುವುದು ಹೇಗೆ ಎಂಬ ಬಗ್ಗೆ ಚರ್ಚಿಸಲು ರಚಿಸಲಾಗುವ ಅಣಕು ಸಮಿತಿಯೊಂದರಲ್ಲಿ ಭಾಗವಹಿಸುವಿಕೆ ಹೊರತು ಇನ್ನೇನೂ ಅಲ್ಲ. ವಿಷಮ ಪರಿಸ್ಥಿತಿಯ ವೇಳೆ ಸಂಗ್ರಹಿಸಲಾದ ಮಾಹಿತಿಯಂತೆ ಸರಕಾರೀ ಉದ್ಯಮಗಳು ಕಾರ್ಮಿಕರ ಸಹಭಾಗಿತ್ವವನ್ನು ಪಡೆದುಕೊಳ್ಳಲು ಯಾವುದೇ ಪ್ರಯತ್ನ ನಡೆಸಲಿಲ್ಲ. ಸೀಮಿತ ಉದ್ದೇಶ ಹೊಂದಿದ್ದ ಸಮಿತಿಗಳನ್ನು ರಚಿಸುವುದನ್ನೂ ಅವು ವಿರೋಧಿಸಿದ್ದವು. ರೈಲ್ವೇ, ಸಾರ್ವಜನಿಕ ವಿಭಾಗದ ಉದ್ಯಮಗಳು ಮತ್ತು ಕಾರ್ಖಾನೆಗಳಲ್ಲಿ ಇಂತಹ ಸಮಿತಿಗಳು ಇದ್ದಿರಲೇ ಇಲ್ಲವಂತೆ. ಇಂದಿರಾಗಾಂಧಿಯ ಬಾಡಿಗೆಯ ಬಂಟರು ಇದೀಗ ಮತ್ತೊಮ್ಮೆ ಇಂತಹದೇ ಕಪಟವನ್ನು ಆಡುವ ಹವಣಿಕೆಯಲ್ಲಿದ್ದಾರೆ.

ಕಾರ್ಮಿಕರ ವೇತನ ಕಡಿತ :

ಕಾಂಗ್ರೆಸ್ (ಐ)ನ ರಾಷ್ಟ್ರೀಯ ವೇತನ ನೀತಿಯ ನಿರೂಪಣೆಯೂ ಅದರ ಪ್ರತಿಗಾಮಿ ಸಿದ್ಧಾಂತಕ್ಕೆ ಅನುಗುಣವಾಗಿಯೇ ಇದೆ. "ಬೇರೆಬೇರೆ ವಿಭಾಗ ಮತ್ತು ಉದ್ಯೋಗಗಳಲ್ಲಿನ ಆದಾಯಗಳ ರಚನೆಯಲ್ಲಿ ಸ್ವೀಕಾರಾರ್ಹವಾದ ಮತ್ತು ಪರಸ್ಪರ ಸಂಬಂಧಿತವಾದ ಮಾನದಂಡವೊಂದನ್ನು ನಿರೂಪಿಸಿಕೊಳ್ಳುವ ಸಲುವಾಗಿ ಕಾಂಗ್ರೆಸ್ (ಐ) ಸ್ಥೂಲವಾದ ರಾಷ್ಟ್ರೀಯ ವೇತನ ನೀತಿಯೊಂದನ್ನು ರಚಿಸಬಯಸುತ್ತದೆ. ಇಂತಹ ಮಾನದಂಡವು ಹಣದುಬ್ಬರದಒತ್ತಡಕ್ಕೆಒಳಗಾಗದಂತೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ವೇತನ ಮಟ್ಟಗಳೊಳಗಿನ ಸಮತೋಲ ತಪ್ಪದಂತೆನೋಡಿಕೊಳ್ಳಲಾಗುವುದು."

ಈ ಎಲ್ಲ ಕಾಡು ಹರಟೆ ಮಾತಿನ ಅರ್ಥವೇನು ? ಇದೆಂತಹ ಆದಾಯ ನೀತಿ? ಪ್ರಾಮಾಣಿಕವಾದ ಆದಾಯ ನೀತಿಯೆಂದರೆ ಬೇರೆಬೇರೆ ವರ್ಗಗಳ ನಡುವಣ ಆದಾಯದಲ್ಲಿರುವ ಅಪಾರ ತಾರತಮ್ಯವನ್ನು ಕಡಿಮೆಗೊಳಿಸುವಂತಿರಬೇಕು. ಅದು ರಾಜ್ಯಾಂಗ ಕ್ರಮಗಳ ಮೂಲಕ ಶೋಷಕ ವರ್ಗಗಳ ಆದಾಯದಲ್ಲಿ ಕಡಿತವುಂಟುಮಾಡಿ ದುರ್ಬಲವರ್ಗಗಳ ಆದಾಯವನ್ನು ಹೆಚ್ಚಿಸಲು ಯೋಗ್ಯ ಕ್ರಮಕೈಗೊಳ್ಳುವಂತಿರಬೇಕು. ರಾಷ್ಟ್ರೀಯ ಆದಾಯವನ್ನು ಶ್ರೀಮಂತವರ್ಗದ ಕಪಿಮುಷ್ಟಿಯಿಂದ ತಪ್ಪಿಸಿ ಸಾಮಾನ್ಯ ಜನರ ಒಳಿತಿಗಾಗಿ ಮರುವಿತರಣೆ ಮಾಡುವಂತಿರಬೇಕು. ಇದು ಕಾಂಗ್ರೆಸ್ (ಐ)ನ ಉದ್ದೇಶ ಅಲ್ಲ. ಅದು ಬೇರೆಬೇರೆ ಕ್ಷೇತ್ರ ಮತ್ತು ಉದ್ಯೋಗಗಳ ನಡುವೆ ಮಾತ್ರ ಪರಸ್ಪರ ಸಮತೋಲವುಂಟುಮಾಡಬಯಸಿದೆ. ಅಂದರೆ ನೌಕರರು ಮತ್ತು ಕಾರ್ಮಿಕ ವರ್ಗದೊಳಗೇ ಇರುವ ವೇತನಗಳ ವ್ಯತ್ಯಾಸವನ್ನು ತಗ್ಗಿಸಬಯಸಿದೆ. ನೌಕರರನ್ನು ಈಗಾಗಲೇ ಅಧಿಕ ವೇತನ ಪಡೆಯುವವರೆಂದು ತೀರ್ಮಾನಿಸಲಾಗಿದೆ. ಹಾಗಾಗಿ ಪರಸ್ಪರರಿಗೆ ಸಮ್ಮತವಾಗುವ 'ಸಮತೋಲನ'ವನ್ನು ನಿರೂಪಿಸುವುದೆಂದರೆ ನೌಕರರ ವೇತನ, ಬೋನಸ್ ಮತ್ತಿತರ ಸವಲತ್ತುಗಳನ್ನು ಕಡಿತಮಾಡಿ ಆ ಮೂಲಕ ಅವರಿಗೂ ತೀರಾ ಕಮ್ಮಿ ವೇತನ ಪಡೆಯುವ ಕಾರ್ಮಿಕರಿಗೂ ಇರುವ ಅಂತರವನ್ನು ಕಿರಿದುಗೊಳಿಸುವುದೆಂದರ್ಥ. ಅತಿ ಕೆಳಗಿನ ಹಂತದ ವೇತನಗಳನ್ನು ಹೆಚ್ಚಿಸುವುದನ್ನೂ ಅಗತ್ಯಾಧಾರಿತ ವೇತನ ನೀಡುವ ಗುರಿಯನ್ನು ಅಂಗೀಕರಿಸಿಕೊಳ್ಳುವುದನ್ನೂ ಬಿಟ್ಟು ಕಾಂಗ್ರೆಸ್ (ಐ) ಪಕ್ಷವು 'ಸ್ವೀಕಾರಾರ್ಹವಾದ ಸಮತೋಲನ'ದ ಹೆಸರಿನಲ್ಲಿ ಮತ್ತೊಮ್ಮೆ ಕಾರ್ಮಿಕರ ವಿರುದ್ಧ ಕಾರ್ಮಿಕರನ್ನೂ, ನೌಕರರ ವಿರುದ್ಧ ನಿಕೃಷ್ಟ ವೇತನ ಪಡೆಯುವ ನೌಕರರನ್ನೂ, ಈ ನೌಕರರ ವಿರುದ್ಧ ಗ್ರಾಮಾಂತರ ಪ್ರದೇಶದ ಕಾರ್ಮಿಕರನ್ನೂ ಎತ್ತಿ ಕಟ್ಟುತ್ತಿದೆ.

ರಾಷ್ಟ್ರೀಯ ಆದಾಯದ ಅಸಮರ್ಪಕ ವಿತರಣೆಯನ್ನು ಸರಿಪಡಿಸಬಲ್ಲಂಥ ಕ್ರಮಗಳಾದ ಗುತ್ತೇದಾರಿ ಸಂಸ್ಥೆಗಳ ರಾಷ್ಟ್ರೀಕರಣ, ಮಿತಿಮೀರಿದ ಲಾಭದ ಮೇಲೆ ಹೆಚ್ಚುವರಿ ತೆರಿಗೆ ಹೇರುವ ಮೂಲಕ ನಿಯಂತ್ರಣ ತರುವುದು ಇತ್ಯಾದಿಗಳ ಪ್ರಸ್ತಾಪವೇ ಈ ಪ್ರಣಾಳಿಕೆಯಲ್ಲಿಲ್ಲ. ನೌಕರರ ನಡುವೆ ಇರುವ ವೇತನ ತಾರತಮ್ಯವನ್ನು ಕಿರಿದುಗೊಳಿಸುವ ಹೆಸರಲ್ಲಿ, ಆಳುವ ವರ್ಗಗಳು ವೇತನಕ್ಕಾಗಿ ಭರಿಸಬೇಕಾದ ವೆಚ್ಚವನ್ನು ಕಡಿಮೆಗೊಳಿಸುವುದೇ ಕಾಂಗ್ರೆಸ್ (ಐ)ನ ಧೋರಣೆ. ಸುಖಮಯ ಚಕ್ರವರ್ತಿ ಆಯೋಗದ ವರದಿಯ ಚೌಕಟ್ಟಿನ ಮೇಲೆ ಆಧರಿಸಿ ನೀಡಲಾಗಿದ್ದ ಕುಖ್ಯಾತ ಭೂತಲಿಂಗಂ ವರದಿಯ ಶಿಫಾರಸುಗಳನ್ನೇ ಕಾಂಗ್ರೆಸ್ (ಐ) ವಸ್ತುಶಃ ಪುನರುಚ್ಚರಿಸುತ್ತಿದೆ.

ಗ್ರಾಮೀಣ ಜನತೆಗೆ ಆಮಿಷ :

ಪ್ರತಿಸಲವೂ ಕಾಂಗ್ರೆಸ್ಸು ಮತಯಾಚನೆಗಾಗಿ ಹೊರಟಾಗ ಅದರಿಂದ ವಂಚಿಸಲ್ಪಡುವ ಗ್ರಾಮೀಣ ಜನತೆ, ರೈತರು ಮತ್ತು ಕೃಷಿಕೂಲಿಕಾರರಿಗೆ ಕಾಂಗ್ರೆಸ್ (ಐ) ಈ ಬಾರಿ ಏನು ಆಶ್ವಾಸನೆ ನೀಡಿದೆ? ಬಹುಶಃ ಅವರಿಗೆ ಬೇಕಾದುದೊಂದನ್ನು ಬಿಟ್ಟು ಮತ್ತೆಲ್ಲವನ್ನು ಒದಗಿಸುವ ಭರವಸೆ ನೀಡಲಾಗಿದೆ; ಮತ್ತು ಈ ಆಶ್ವಾಸನೆಗಳನ್ನು ಎಂದೂ ಈಡೇರಿಸಲಾಗುವುದಿಲ್ಲವೆಂಬುದು ಹಿಂದಿನ ಅನುಭವದಿಂದ ಗೊತ್ತಾಗುತ್ತದೆ. ಸಣ್ಣ ಮತ್ತು ಮಧ್ಯಮ ತರಗತಿಯ ರೈತರಿಗೆಬೇಕಾದಷ್ಟು ಸವಲತ್ತುಗಳನ್ನು ಒದಗಿಸುವ ಆಶ್ವಾಸನೆ ನೀಡುವ ಮೂಲಕ ಅವರ ಮತಗಳನ್ನು ಗೆದ್ದುಕೊಳ್ಳಲು ಶತಪ್ರಯತ್ನ ಮಾಡುತ್ತಿದೆ. ಹೆಚ್ಚಿನ ಸಾಲಸೌಲಭ್ಯ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಸ್ಥಾಪನೆ, ಸಣ್ಣರೈತರಿಗೂ ದುರ್ಬಲವರ್ಗದವರಿಗೂ ಕಡಿಮೆ ಬಡ್ಡಿಯ ಸಾಲ, ವ್ಯವಸಾಯಗಾರರಿಗೆ ಈಗ ನೀಡಲಾಗುತ್ತಿರುವ ಹೆಚ್ಚುದರದ ಸಾಲದ ಬಡ್ಡಿಯಲ್ಲಿ ಕಡಿತ, ಪಹಣಿ ಪತ್ರಗಳ ಪರಿಷ್ಕರಣ, ಚಿಕ್ಕ ರೈತರಿಗೆ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಪೂರಕ ಉದ್ಯೋಗ, ಕೃಷಿ ಕೈಗಾರಿಕೆಗಳ ಸ್ಥಾಪನೆ, ಧಾನ್ಯದಾಸ್ತಾನು ಸೌಲಭ್ಯದ ಒದಗಿಸುವಿಕೆ, ಐದು ಎಕರೆ ಮತ್ತು ಅದಕ್ಕಿಂತ ಕಡಿಮೆ ಇರುವ ಭೂಹಿಡುವಳಿಗಳಿಗೆ ಭೂಕಂದಾಯದಿಂದ ವಿನಾಯತಿ ನೀಡಿ ಅದರ ಬದಲಿಗೆ ಇನ್ನೂ ನ್ಯಾಯೋಚಿತವಾದ ತೆರಿಗೆ, ಚಿಕ್ಕ ಮತ್ತು ಅಲ್ಪಪ್ರಮಾಣದ ರೈತರನ್ನು ಆರ್ಥಿಕವಾಗಿ ಹಿಂದುಳಿದವರೆಂದು ಪರಿಗಣಿಸುವುದು, ಎಲ್ಲಾ ಹಳ್ಳಿಗಳಿಗೂ ಜಲ್ಲಿಕಲ್ಲು ಹಾಕಿರುವ ಸಂಪರ್ಕ ರಸ್ತೆಗಳ ನಿರ್ಮಾಣ, ಗ್ರಾಮಾಂತರ ಪ್ರದೇಶಗಳ ವಿದ್ಯುದೀಕರಣ, ಬೆಳೆಗಳ ವಿಮಾಯೋಜನೆ ಹೀಗೆ ಒಂದೇ ಎರಡೇ, ಕಾಂಗ್ರೆಸ್ (ಐ) ಪ್ರಣಾಳಿಕೆಯಲ್ಲಿ ಏನಿದೆ, ಏನಿಲ್ಲ ?

ಆದರೆ ಈ ಯಾವತ್ತೂ ಆಶ್ವಾಸನೆಗಳಲ್ಲಿ ಯಾವುದೂ ಹೊಸತಲ್ಲ. ಇವೆಲ್ಲ ಇಂದಿರಾಗಾಂಧಿಯ ಆಡಳಿತೆ ಮತ್ತು ರಾಷ್ಟ್ರೀಯ ಯೋಜನೆಗಳಷ್ಟೇ ಹಳತಾದವುಗಳು ಮತ್ತು ಅವು ಎಂದೆಂದೂ ಈಡೇರಿಸಲ್ಪಡಲಾರದವುಗಳೆಂಬ ಕೀರ್ತಿ ಪಡೆದಿವೆ. ಹಾಗಾಗಿ ಈ ಭರವಸೆಗಳ ಸರಮಾಲೆ ರೈತರ ಸಮಸ್ಯೆಗಳ ಬಗ್ಗೆ ಹೊಸ ತಿಳುವಳಿಕೆಯನ್ನಾಗಲೀ ಈ ಭರವಸೆಗಳನ್ನು ಈಡೇರಿಸುವ ಆಸಕ್ತಿಯನ್ನಾಗಲೀ ತೋರಿಸುತ್ತಿಲ್ಲ. ಐದು ಎಕರೆಗಳಿಗಿಂತ ಕಮ್ಮಿಯಿರುವ ಹಿಡುವಳಿಗಳನ್ನು ಭೂಕಂದಾಯದಿಂದ ವಿನಾಯತಿಗೊಳಿಸುವ ಆಶ್ವಾಸನೆಯೊಂದೇ ಇದರಲ್ಲಿ ತುಸುವಾದರೂ ಹೊಸತಾದುದು.

ಭೂಸುಧಾರಣೆಯ ನಾಪತ್ತೆ :

ಒಟ್ಟಿನಲ್ಲಿ ಭೂಸುಧಾರಣೆಯ ಮಹತ್ವವನ್ನು ಅಲ್ಲಗಳೆಯುವುದೇ ಈ ಎಲ್ಲ ದೊಡ್ಡ ಆಶ್ವಾಸನೆಗಳ ಪಟ್ಟಿಯ ಉದ್ದೇಶ. ಭೂಸುಧಾರಣೆಯನ್ನು ಗೌಣವಾದ ಪ್ರಶ್ನೆಯೆಂಬಂತೆ ಉಪೇಕ್ಷಿಸಿಬಿಡಲಾಗಿದೆ. "ಭೂಸುಧಾರಣೆಯನ್ನು ಜಾರಿಗೆತರಲು ವಿಶೇಷತಃ ಈ ದಿಸೆಯಲ್ಲಿ ಹಿಂದೆ ಬಿದ್ದಿರುವ ರಾಜ್ಯಗಳಲ್ಲಿ ಗಂಭೀರ ಪ್ರಯತ್ನ ನಡೆಸಲಾಗುವುದು. ಜನತಾಪಕ್ಷದ ಆಡಳಿತೆಯಲ್ಲಿ ಭೂಮಿಯಿಂದ ಒಕ್ಕಲೆಬ್ಬಿಸಲ್ಪಟ್ಟವರಿಗೆ ಅವರ ಭೂಮಿಯನ್ನು ಮರಳಿಸಲಾಗುವುದು."

ಉಳುವವನಿಗೇ ಹೊಲ ನೀಡುವಂತಹ ಭೂಸುಧಾರಣೆಯ ಕಾರ್ಯಕ್ರಮದ ಕುರಿತು ಏನೂ ಹೇಳಲಾಗಿಲ್ಲ. ಕೇವಲ ಜನತಾಪಕ್ಷದ ಅಧಿಕಾರಾವಧಿಯಲ್ಲಿ ಭೂಮಿ ಕಳಕೊಂಡವರಿಗೆ ಅವರ ಭೂಮಿಯನ್ನು ಮರಳಿಸಲಾಗುತ್ತದೆ. ದೇಶದ ಶೇಕಡಾ 10 ರಷ್ಟಿರುವ ಭೂಮಾಲಕರ ಕೈಯಲ್ಲಿ ಭೂಮಿಯನ್ನೂ ಒಳಗೊಂಡಂತೆ ಶೇಕಡಾ50 ರಷ್ಟು ಗ್ರಾಮೀಣ ಆಸ್ತಿ ಕೇಂದ್ರೀಕೃತವಾಗಿರುವುದನ್ನು ತಡೆಗಟ್ಟಲು ಯಾವ ಕಾರ್ಯಕ್ರಮವೂ ಪ್ರಣಾಳಿಕೆಯಲ್ಲಿಲ್ಲ. ಇದು ಕಾಂಗ್ರೆಸ್ (ಐ) ದೊಡ್ಡ ಭೂಮಾಲಕರಿಗೆ ಇತ್ತಿರುವ ಆಶ್ವಾಸನೆಗೊಂದು ಪುರಾವೆ. ಭೂಪರಿಮಿತಿಯ ಬಗ್ಗೆಯಾಗಲೀ, ಭೂಪರಿಮಿತಿಗಿಂತಲೂ ಮಿಕ್ಕಿ ಭೂಹಿಡುವಳಿಗಳನ್ನು ಹೊಂದಿರುವ ಭೂಮಾಲಕರ ಒಡೆತನದಲ್ಲಿರುವ ಮಿಲಿಯಾಂತರ ಎಕರೆ ಜಮೀನಿನ ಬಗೆಗಾಗಲೀ ಒಂದೇ ಒಂದು ಶಬ್ದವನ್ನೂ ಹೇಳಲಾಗಿಲ್ಲ. ಯೋಜನಾ ಆಯೋಗ ಅಂದಾಜು ಮಾಡಿರುವ ಪ್ರಕಾರ ಇರುವ ಇಪ್ಪತ್ತೊಂದು ಮಿಲಿಯ ಎಕರೆ ಮಿಗತೆ ಭೂಮಿಯ ವಿಷಯ ಏನೂ ಹೇಳಲಾಗಿಲ್ಲ. ಭೂಮಾಲೀಕರಿಗೆ ಇದಕ್ಕಿಂತ ಮಿಗಿಲಾದುದು ಇನ್ನೇನು ಬೇಕು ?

ಹೀಗೆ ಬಹು ಮಹತ್ವದ ಪ್ರಶ್ನೆಗಳಲ್ಲಿ ಗ್ರಾಮೀಣ ಜನತೆಗೆ ದ್ರೋಹ ಬಗೆದ ಬಳಿಕ, ಕಾಂಗ್ರೆಸ್ (ಐ) ಪ್ರಣಾಳಿಕೆ ಕೃಷಿಕಾರ್ಮಿಕರಿಗೆ ಕನಿಷ್ಟ ವೇತನವನ್ನು ನೀಡುವ ಆಶ್ವಾಸನೆಕೊಟ್ಟಿದೆ. ಈ ಕನಿಷ್ಟವೇತನ ಕಾಯ್ದೆಯನ್ನು ಯಾವತ್ತೂ ಅನುಷ್ಠಾನಕ್ಕೆ ತರಲಾಗಿಲ್ಲ. ಕಳೆದ ಹದಿನೈದು ವರ್ಷಗಳಲ್ಲಿ ಕೃಷಿಕಾರ್ಮಿಕರ ವೇತನ ಬಹಳಷ್ಟು ಕುಸಿದಿದೆ. ಆಮೇಲೆ ಯಥಾಪ್ರಕಾರ ಮನೆ ನಿವೇಶನಗಳನ್ನು ಒದಗಿಸುವ ಆಶೆಯನ್ನೂ ತೋರಿಸಲಾಗಿದೆ. ಇದೇ ಆಶ್ವಾಸನೆಯನ್ನು ಇಪ್ಪತ್ತಂಶ ಕಾರ್ಯಕ್ರಮದಲ್ಲೂ ನೀಡಲಾಗಿತ್ತು ಮತ್ತು ವಿಷಮ ಪರಿಸ್ಥಿತಿಯ ವೇಳೆ ಸರಕಾರದ ಕೈಯಲ್ಲಿನಿರಂಕುಶಾಧಿಕಾರವಿದ್ದಾಗಲೂ ಈ ಕಾರ್ಯಕ್ರಮದ ಪ್ರಯೋಜನ ಲಭಿಸಿದ್ದು ಕೆಲವೇ ಜನಕ್ಕೆ ಮಾತ್ರ; ಬಹುಸಂಖ್ಯಾತರ ಪಾಲಿಗಂತೂ ಇದೊಂದು ವಂಚನೆ ಮಾತ್ರ ಆಗಿ ಪರಿಣಮಿಸಿತ್ತು.

ಗ್ರಾಮಾಂತರ ಕುಟುಂಬಗಳಲ್ಲಿ ಪ್ರತಿಯೊಂದರಲ್ಲೂ ಕನಿಷ್ಟ ಒಬ್ಬನಿಗಾದರೂ ಉದ್ಯೋಗ ನೀಡಲಾಗುವುದೆಂಬ ಆಸೆಯನ್ನೂ ತೋರಿಸಲಾಗಿದೆ. ಹ್ಞಾಂ! ಮತ್ತೆ 'ಬಡಜನರ ಪಾಲಿಗೆ ವರದಾನವಾಗಿ ಬಂದಿದ್ದ' ಇಪ್ಪತ್ತಂಶ ಕಾರ್ಯಕ್ರಮವನ್ನು ಪುನರುಚ್ಚರಿಸಲಾಗಿದೆಯಲ್ಲದೆ ಅದನ್ನು ನಿರ್ಜೀವವಾಗಲು ಬಿಡದೆ ಪುನಶ್ಚೇತನಗೊಳಿಸಲಾಗುವುದೆಂದೂ ಆಶ್ವಾಸನೆ ನೀಡಲಾಗಿದೆ. ಮತ್ತು ಕಾಂಗ್ರೆಸ್ (ಐ) ಬಲವಂತದ ಸಂತಾನಹರಣಕ್ಕೆ ವಿರುದ್ಧವಾಗಿದೆಯೆಂದೂ ಘೋಷಿಸಲಾಗಿದೆ. "ಕುಟುಂಬ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿ ಯಾವುದೇ ಪ್ರಕಾರದ ಬಲವಂತ ಅಥವಾ ಶಿಕ್ಷಾಕ್ರಮಗಳಿಗೆ ಕಾಂಗ್ರೆಸ್ (ಐ) ವಿರೋಧವಾಗಿದೆ". 1977ರಲ್ಲಿ ಕಾಂಗ್ರೆಸ್ ಪರಾಭವಗೊಂಡನಂತರ ಸಾಧಿಸಲಾದ ಸುಧಾರಣೆ ಪ್ರಾಯಶಃ ಇದೊಂದೇ.

ವಿದೇಶಿ ನೀತಿ :

ಭೂಮಾಲಕರು, ಬಂಡವಾಳಗಾರರು, ಬಹುರಾಷ್ಟ್ರೀಯ ಸಂಸ್ಥೆಗಳು ಮತ್ತು ವಿಶ್ವಬ್ಯಾಂಕಿಗೆ ತನ್ನ ವಿಶ್ವಾಸಾರ್ಹತೆಯ ಬಗ್ಗೆ ವಚನ ನೀಡಿದ ಬಳಿಕ, ಪ್ರಜಾಸತ್ತೆಯನ್ನು ಬಲಗೊಳಿಸುವ ಇಚೆ ತನಗಿಲ್ಲವೆನ್ನುವುದನ್ನೂ ತಾನಿನ್ನೂ ವಿಷಮ ಪರಿಸ್ಥಿತಿಯ ಆಳ್ವಿಕೆಯನ್ನೇ ಬೆಂಬಲಿಸಲು ಬದ್ಧನಾಗಿದ್ದೇನೆಂದೂ ಸ್ಪಷ್ಟಪಡಿಸಿದ ಮೇಲೆ ಮತ್ತು ಬಂಡವಾಳಶಾಹಿ ಪತ್ರಿಕೆಗಳಿಗೆ ಸ್ವಾತಂತ್ರ್ಯ ನೀಡಲಾಗುವುದೆಂಬುದನ್ನು ವಿದೇಶೀ ಸಾರ್ವಜನಿಕ ಅಭಿಪ್ರಾಯಕ್ಕೆ ಅಂದರೆ ಸಾಮ್ರಾಜ್ಯಶಾಹಿ ಜಗತ್ತಿಗೆ ಖಚಿತಪಡಿಸಿದ ಬಳಿಕ, ಕಾಂಗ್ರೆಸ್ (ಐ)ತನ್ನ ವಿದೇಶ ನೀತಿಯ ಬಗ್ಗೆ ಹೇಳಿಕೊಂಡಿದೆ.

ಈ ದಿಸೆಯಲ್ಲಿ ಕಾಂಗ್ರೆಸ್ (ಐ) ಪ್ರಣಾಳಿಕೆ ಸಾಕಷ್ಟು ಒಳ್ಳೆಯ ಉದ್ದೇಶವನ್ನು ಒಳಗೊಂಡಿದೆ ಮತ್ತು ಈ ಉದ್ದೇಶಗಳೊಂದಿಗೆ ಯಾರಾದರೂ ಸಹಮತ ವ್ಯಕ್ತಪಡಿಸಬಹುದು. ಭಾರತೀಯ ಭೂಪ್ರದೇಶದ ಪ್ರಾದೇಶಿಕ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು, ದೇಶದ ರಕ್ಷಣಾ ಸಾಮರ್ಥ್ಯವನ್ನು ಬಲಗೊಳಿಸುವುದು, ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶದ ಪ್ರತಿಷ್ಟೆ, ಆತ್ಮಗೌರವ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದು, ಶಾಂತಿಯುತ ಉದ್ದೇಶಗಳಿಗಾಗಿ ಅಣುಶಕ್ತಿ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಭಾರತಕ್ಕಿರುವ ಸಾರ್ವಭೌಮ ಹಕ್ಕನ್ನು ರಕ್ಷಿಸಿಕೊಳ್ಳುವುದು, ಶಾಂತಿಯುತ ಸಹಬಾಳ್ವೆ ಮತ್ತು ಜವಾಹರಲಾಲ ನೆಹರು ಅವರು ರೂಪಿಸಿದ್ದ ಅಲಿಪ್ತ ನೀತಿ, ದಕ್ಷಿಣ ಏಷ್ಯಾದ ರಾಷ್ಟ್ರಗಳು, ಇಂಡೋಚೈನಾದ ದೇಶಗಳು, ಆಗ್ನೇಯ ಏಷ್ಯಾದ ರಾಷ್ಟ್ರಗಳು ಇತ್ಯಾದಿಗಳೊಂದಿಗೆ ನಿಕಟ ಬಾಂಧವ್ಯವನ್ನು ಬೆಳೆಸಿಕೊಳ್ಳುವುದು, ಈ ಪ್ರದೇಶದ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗೆ ಮತ್ತು ಪಾಲೆಸ್ತೀನಿಯರು ತಮ್ಮ ಮಾತೃಭೂಮಿಯನ್ನು ಮರಳಿ ಪಡೆಯಲು ಮುಂದೊಡ್ಡಿರುವ ಪ್ರಾಮಾಣಿಕ ಬೇಡಿಕೆಗೆ ಪೂರ್ಣ ಬೆಂಬಲ ನೀಡುವುದು, ನವಸಾಮ್ರಾಜ್ಯವಾದಿಗಳು ಸುಯೆಜ್‌ನಿಂದ ಪ್ರಾರಂಭಿಸಿ ದೂರ ಪ್ರಾಚ್ಯದವರೆಗಿನ ಸಮಗ್ರ ಭೂಖಂಡದಲ್ಲಿ ಅಸ್ಥಿರತೆಯುಂಟುಮಾಡಲು ನಡೆಸುತ್ತಿರುವ ಷಡ್ಯಂತ್ರಗಳನ್ನು ಸೋಲಿಸಲು ಸಂಘಟಿತ ಪ್ರಯತ್ನ ನಡೆಸುವುದು ಮತ್ತು ಕಂಪೂಚಿಯಾದ ಕ್ರಾಂತಿಕಾರಿ ಸರಕಾರಕ್ಕೆ ಮಾನ್ಯತೆ ನೀಡುವುದು ಇತ್ಯಾದಿ.

ಇವರನ್ನು ನಂಬುವವರು ಯಾರು?

ಯಾವ ರಾಜಕೀಯ ಪಕ್ಷದ ಒಬ್ಬ ಮುಖಂಡ-ಅದೂ ಒಬ್ಬ ಕ್ಯಾಬಿನೆಟ್ ಸಚಿವರು ಸಿ. ಐ. ಎ. ಯ ಹಸ್ತಕನಾಗಿ ವರ್ತಿಸಿದ್ದನೆಂದು ಹೇಳಲಾಗಿದೆಯೋ, ಮತ್ತು ಆತ ರಕ್ಷಣಾ ರಹಸ್ಯವನ್ನು ಸಿ. ಐ. ಎ. ಗೆ ತಿಳಿಸಿದ್ದಾನೆನ್ನಲಾಗಿದೆಯೋ ಅಂತಹ ಪಕ್ಷವೊಂದು ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿಯ ವಿರುದ್ಧ ಮತ್ತು ರಾಷ್ಟ್ರೀಯ ಆತ್ಮಗೌರವದ ರಕ್ಷಣೆಗಾಗಿ ಹೋರಾಟ ನಡೆಸಲು ಸಾಧ್ಯವಿದೆಯೇ ಎನ್ನುವ ಮುಖ್ಯ ಪ್ರಶ್ನೆಯೊಂದು ಇಲ್ಲಿ ಉದ್ಭವಿಸುತ್ತದೆ. ಈ ಸಿ. ಐ. ಎ. ಹಸ್ತಕನೆನ್ನಲಾದ ವ್ಯಕ್ತಿಯ ಹೆಸರನ್ನು ಈವರೆಗೂ ಗೋಪ್ಯವಾಗಿರಿಸಿದ ಮತ್ತು

[7ನೇ ಪುಟ ನೋಡಿ]

ಕಾರ್ಮಿಕ ವರ್ಗಕ್ಕೊಂದು ಸವಾಲು

[2ನೇ ಪುಟದಿಂದ]

14% ಮಾನವ ದಿನಗಳು ನಷ್ಟವಾದವು. ಜುಲೈಯಿಂದ ಡಿಸೆಂಬರ್ 75 ರವರೆಗೆ 65%ಮತ್ತು ಈ ಏರಿಕೆ 1976 ಜನವರಿಯಿಂದ ಜುಲೈ ಅವಧಿಯಲ್ಲಿ 81./· ರಷ್ಟಾಯಿತು. ಸರಕಾರ ತನ್ನ ಆಶ್ರಯದಲ್ಲಿ ಎ. ಐ. ಟಿ. ಯು. ಸಿ. ಮತ್ತು ಹೆಚ್. ಎಂ. ಎಸ್. ನ ಒಂದು ವಿಭಾಗದ ಸಂಘಟನೆಗಳನ್ನು ಸೇರಿಸಿ ಒಂದು ಅಪೆಕ್ಸ್ ಬಾಡಿಯನ್ನು ರಚಿಸಿತು. ಸರಕಾರದ ಈ ಛಿದ್ರಕಾರಕ ಚಟುವಟಿಕೆಗಳಿಗೆ ಶ್ರೀಮಾನ್ ಡಾಂಗೆ ಸಾಹೇಬರಬೆಂಬಲ ಬಹಿರಂಗವಾಗಿತ್ತು.

ಆದರೆ ಇವಾವೂ ಕಾರ್ಮಿಕರ ಸ್ಫೂರ್ತಿಯನ್ನು, ಹೋರಾಡುವ ಚೈತನ್ಯವನ್ನು ಶಾಶ್ವತವಾಗಿ ತಡೆಗಟ್ಟದಾದವು. ಮೊದಮೊದಲು ಸ್ವಲ್ಪ ಮಟ್ಟಿಗೆ ಗೊಂದಲ ಮತ್ತು ಭಿನ್ನಾಭಿಪ್ರಾಯಗಳಿದ್ದರೂ ನಂತರ ಚೇತರಿಸಿಕೊಂಡು ಅನೇಕ ದೀರ್ಘ ಹೋರಾಟಗಳನ್ನು ಪ್ರಾರಂಭಿಸಿತು. 1975ರ ಬೋನಸ್ ಕಾಯ್ದೆಯನ್ನು ಪ್ರತಿಭಟಿಸಿ ಬೃಹತ್ ಮತಪ್ರದರ್ಶನ, ಮುಷ್ಕರಗಳು ರೂಪಗೊಂಡವು. ಪಶ್ಚಿಮ ಬಂಗಾಳದಲ್ಲಿ 12000 ಬಾಟಾ ಕಾರ್ಮಿಕರು 33 ದಿನಗಳ ದೀರ್ಘ ಹೋರಾಟ ನಡೆಯಿತು. ಇದೇ ಸಮಯಕ್ಕೆ ಕೇರಳ, ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಹೋರಾಟಗಳು ನಡೆದವು. ಜೂಟ್ ಉದ್ದಿಮೆ, ಪ್ಲಾಂಟೇಷನ್ ಮತ್ತಿತರ ಕೈಗಾರಿಕೆಗಳಲ್ಲಿ ಅನೇಕ ಸಾಂಕೇತಿಕ ಮುಷ್ಕರಗಳು ನಡೆದವು.

ಅನೇಕ ಪ್ರತಿಕೂಲಗಳ ನಡುವೆಯೂ ದೀರ್ಘ ಹೋರಾಟದ ಪರಂಪರೆ ಇದ್ದ ಭಾರತದ ಕಾರ್ಮಿಕ ವರ್ಗ ತುರ್ತುಪರಿಸ್ಥಿತಿಯಲ್ಲೂ ಧೈರ್ಯದಿಂದ, ವೀರೋಚಿತವಾಗಿ ದಬ್ಬಾಳಿಕೆಯನ್ನು ಎದುರಿಸಿತು ಗಮನಿಸಬೇಕಾದ ಮಹತ್ವದ ಅಂಶವೆಂದರೆ ಅನೇಕ ಸಂಯುಕ್ತ ಹೋರಾಟಗಳ ಮುಂಚೂಣಿಯನ್ನು CITU ವಹಿಸಿತ್ತು. ಪ್ರಾರಂಭದ ಅವಧಿಯಲ್ಲಿ ಸ್ವಲ್ಪ ಮುಗ್ಗರಿಸಿದರೂ ಸಿ. ಐ. ಟಿ. ಯು. ನೇತೃತ್ವದಲ್ಲಿ ಮಹತ್ವದ ಹೋರಾಟಗಳು ನಡೆದವು.

ಶಿಸ್ತಿನ ಹೆಸರಿನಲ್ಲಿ ಕಾರ್ಮಿಕರ ಹೋರಾಟಗಳನ್ನು ಸದೆಬಡೆಯುವ ಸರಕಾರದ ಯೋಜನೆ ವಿಫಲವಾಯಿತು. ಅಲ್ಲದೇ ಕಾರ್ಮಿಕರನ್ನು ಸಮರಶೀಲ (militant) ಟ್ರೇಡ್ ಯೂನಿಯನ್ ಸಂಘಟನೆಗಳಿಂದ ದೂರವಿರುವ ಸಂಚು ಫಲಪ್ರದವಾಗಲಿಲ್ಲ. ಅದರಲ್ಲೂ ಸಿ. ಐ. ಟಿ. ಯು. ವನ್ನು ನಿಷ್ಕ್ರಿಯಗೊಳಿಸುವುದೂ ಸಾಧ್ಯವಾಗಲಿಲ್ಲ. ಕಾರ್ಮಿಕರು ಸಿ. ಐ. ಟಿ. ಯು. ನ ಮೇಲಿನ ವಿಶ್ವಾಸ ಕಳೆದುಕೊಳ್ಳಲಿಲ್ಲವಷ್ಟೇ ಅಲ್ಲ ಆಳುವವರ್ಗದೊಂದಿಗೆ ಸಹಕರಿಸುವ (class colloboration) ನೀತಿಯನ್ನೂ ಸ್ಪಷ್ಟವಾಗಿ ನಿರಾಕರಿಸಿದರು. ತುರ್ತುಪರಿಸ್ಥಿತಿಯ ಕರಾಳ ದಿನಗಳಲ್ಲೂ ಪಶ್ಚಿಮ ಬಂಗಾಳದಲ್ಲಿ ಪ್ರಾವಿಡೆಂಟ್ ಫಂಡ್, ಟ್ರಸ್ಟೀ ಬೋರ್ಡ್, ವರ್ಕ್ಸ್ ಕಮಿಟಿ ಮತ್ತು ಸಹಕಾರ ಸಂಸ್ಥೆಗಳಿಗೆ ಸಿ. ಐ. ಟಿ. ಯು. ಪ್ರತಿನಿಧಿಗಳು ಚುನಾಯಿತರಾದರು. ತುರ್ತುಪರಿಸ್ಥಿತಿ ವಾಪಸಾದ ನಂತರ ದೆಹಲಿ, ಹರ್ಯಾಣ ಮತ್ತಿತರ ಪ್ರದೇಶಗಳಲ್ಲಿ ಐ.ಎನ್.ಟಿ.ಯು.ಸಿ., ಎ. ಐ. ಟಿ. ಯು. ಸಿ. ಗಳಿಗೆ ಸೇರಿದ ಕಾರ್ಮಿಕ ಸಂಘಗಳು "ವರ್ಗಸಹಯೋಗ" ನೀತಿಯನ್ನು ಧಿಕ್ಕರಿಸಿ ಹೋರಾಟಗಳಲ್ಲಿ ಸಿ. ಐ. ಟಿ. ಯು. ನೊಂದಿಗೆ ಸೇರಿದವು.

ಫೆಬ್ರವರಿ 1977ರ ಲೋಕಸಭಾ ಚುನಾವಣೆಗಳಲ್ಲಿ ಇಂದಿರಾರನ್ನು ಮತ್ತು ಆಕೆಯ ಪಕ್ಷವನ್ನು ಜನತೆಯು ಕಿತ್ತೊಗೆದ ನಂತರ ತುರ್ತುಪರಿಸ್ಥಿತಿ ವಾಪಸಾಯಿತು. ಸಮರಶೀಲ (militant) ಭಾರತದ ಕಾರ್ಮಿಕ ವರ್ಗ ಈ ಐತಿಹಾಸಿಕ ಘಟ್ಟದಲ್ಲಿ ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ, ಜನವಿರೋಧಿ, ಕಾರ್ಮಿಕ ವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಸರ್ವಾಧಿಕಾರಿ ಗಾಂಧಿಯನ್ನು ಕಿತ್ತೊಗೆದು ಕೇಂದ್ರದಲ್ಲಿ ಸ್ವಾತಂತ್ರ್ಯಾನಂತರದ ಪ್ರಥಮ ಕಾಂಗ್ರೆಸ್ಸೇತರ ಸರಕಾರ ರಚಿಸುವಲ್ಲಿ ಸಹಕರಿಸಿತು.

ಪಶ್ಚಿಮ ಬಂಗಾಳದ ರೈತಕಾರ್ಮಿಕರು, ಕೃಷಿಕೂಲಿಕಾರರು ಮತ್ತೊಂದು ಹೆಜ್ಜೆ ಮುಂದಿಟ್ಟರು. ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗವನ್ನು ಚುನಾಯಿಸಿದರು. ಕಲಕತ್ತಾ ಮತ್ತಿತರ ಔದ್ಯೋಗಿಕ ಕೇಂದ್ರಗಳಿಂದ ಅನೇಕ ಕಾರ್ಮಿಕ ಧುರೀಣರು ವಿಧಾನಸಭೆಗೆ ಚುನಾಯಿತರಾದರು.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಅದೇ ಜಮೀನ್ದಾರಿ, ಬಂಡವಾಳಶಾಹಿ ನೇತೃತ್ವದ ಜನತಾ ಸರಕಾರ ಹಲವು ಪಕ್ಷಗಳ ಒಕ್ಕೂಟವಾಗಿತ್ತು. ಪಶ್ಚಿಮ ಬಂಗಾಲ ಮತ್ತು ತ್ರಿಪುರಾಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಡಪಕ್ಷಗಳ ಒಕ್ಕೂಟ ಅಧಿಕಾರಕ್ಕೆ ಬಂದಿದ್ದರೂ ಅಖಿಲ ಭಾರತ ಮಟ್ಟದಲ್ಲಿ ಎಡಪಕ್ಷಗಳು ದುರ್ಬಲವಾಗಿದ್ದವು.

ಸ್ವಲ್ಪಮಟ್ಟಿಗೆ ತುರ್ತುಪರಿಸ್ಥಿತಿಯಲ್ಲಿ ಹತ್ತಿಕ್ಕಿದ್ದ ಕಾರ್ಮಿಕಶಕ್ತಿ ಜನತಾ ಅಧಿಕಾರಕ್ಕೆ ಬಂದ ನಂತರ ಸ್ಫೋಟಿಸಿತು. ಸಮಾಚಾರ ವೀಕ್ಷಣೆ ಪ್ರಕಾರ 1977 ಮಾರ್ಚ್ 15 ರಿಂದ ಜುಲೈ 15ರೊಳಗೆ ಮುಷ್ಕರ ಮತ್ತು ಲಾಕ್ ಔಟ್‌ಗಳಿಂದಾಗಿ 4.2 ಮಿಲಿಯನ್ ಮಾನವ ದಿನಗಳು ನಷ್ಟವಾದವು. ದೇಶಾದ್ಯಂತ ಹೋರಾಟಗಳು ಪ್ರಾರಂಭವಾದವು. ಆಳುವ ವರ್ಗದ ಕಭಂದ ಬಾಹುಗಳು ಕಾರ್ಮಿಕ ವರ್ಗದ ಇತರ ಶೋಷಿತ ಜನರ ಹೋರಾಟವನ್ನು ಅತೀ ಕ್ರೂರವಾಗಿ ಹತ್ತಿಕ್ಕಿದವು. ಉತ್ತರ ಪ್ರದೇಶದ ಗಾಜಿಯಾಬಾದ, ಕಾನ್ಪುರ ಮತ್ತು ಪಂತನಗರ, ಹರ್ಯಾನಾದ ಫರೀದಾಬಾದ್, ಮಧ್ಯ ಪ್ರದೇಶದ ಬೈಲಾದಿಲ್ಲಾ ಘಟನೆಗಳು ಜನತಾ ಸರಕಾರದ ವರ್ಗಗುಣವನ್ನು ಎತ್ತಿತೋರಿಸಿದವು. ಬ್ರಿಟಿಷ್ ಆಳ್ವಿಕೆ ಕಾಲಕ್ಕೆ ನಡೆದ ಕುಖ್ಯಾತ ಜಾಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನೂ ಈ ಘಟನೆಗಳು ನಾಚಿಸಿದವು. 17 ಏಪ್ರಿಲ್ 78 ರಂದು ಬಂಡವಾಳಶಾಹಿ ವೃತ್ತಪತ್ರಿಕೆಯಲ್ಲಿ ಬಂದ ವರದಿಯ ಪ್ರಕಾರ ಕೇವಲ ಒಂದು ತಿಂಗಳ ಅವಧಿಯಲ್ಲಿ ದೇಶದ ಹಲವೆಡೆ ನಡೆದ ಪೋಲೀಸರ ಕಾರ್ಯಾಚರಣೆಯಿಂದ 300 ಜನರು ಗೋಳಿಬಾರಿನಿಂದ ಮೃತರಾದರು. ಕೇವಲ 10 ತಿಂಗಳ ಜನತಾ ಆಳ್ವಿಕೆಯಲ್ಲಿ ಉತ್ತರ ಪ್ರದೇಶದಲ್ಲಿ 38 ಗೋಳಿಬಾರಿನ ಘಟನೆಗಳು ನಡೆದವು. ಎಡಪಕ್ಷಗಳು ಅಧಿಕಾರದಲ್ಲಿದ್ದ ರಾಜ್ಯಗಳನ್ನು ಬಿಟ್ಟು ಜನತಾಯೇತರ ಸರಕಾರಗಳೂ ದುಡಿಯುವ ವರ್ಗದ ಹೋರಾಟಗಳನ್ನೂ ಕ್ರೂರವಾಗಿ ಸದೆಬಡೆವಲ್ಲಿ ಪಾಲ್ಗೊಂಡವು. ಕೇಂದ್ರದ ಜನತಾ ಸರಕಾರವು ಕಾರ್ಮಿಕ ವಿರೋಧಿ ನೀತಿಯನ್ನು ಸ್ಪಷ್ಟವಾಗಿ ಅನುಸರಿಸಹತ್ತಿತು. ರೈಲ್ವೆ ಕಾರ್ಮಿಕರಿಗೆ ಬೋನಸ್ ಕೊಡುವುದನ್ನು ವಿರೋಧಿಸಲಾಯಿತು. ಬೋನಸ್ ತಡೆಹಿಡಿಯಲ್ಪಟ್ಟ ಸಂಬಳ ಎಂಬ ಸಿದ್ಧಾಂತವನ್ನು ಒಪ್ಪಲಿಲ್ಲ. ಎಲ್ಲ ಕಾರ್ಮಿಕ ಸಂಘಟನೆಗಳ ಅತ್ಯುಗ್ರ ವಿರೋಧವಿದ್ದಾಗ್ಯೂ ಭೂತಲಿಂಗಂ ಕಮಿಟಿ ರಚಿಸಲ್ಪಟ್ಟಿತು. ವೇತನದಲ್ಲಿ ಕಡಿತಮಾಡಬೇಕೆಂದೂ ಕನಿಷ್ಟ ವೇತನ ರೂ. 100 ಮಾತ್ರ ಇರಬೇಕೆಂದು ಈ ಕಮಿಟಿ ಶಿಫಾರಸು ಮಾಡಿತು. ಅಲ್ಲದೇ ಹೊಸ ತುಟ್ಟಿಭತ್ಯ (ಡಿ. ಎ.) ನೀತಿಯೊಂದನ್ನು ರೂಪಿಸಿತು. ಇದರಿಂದ ಕಾರ್ಮಿಕರ ನಿಜವೇತನ (Real wage)ದಲ್ಲಿ ಅಪ್ರತ್ಯಕ್ಷವಾಗಿ ಕಡಿತವಾಡುತ್ತಿತ್ತು.

ನಂತರ ಕಾರ್ಮಿಕ ವರ್ಗದ ಚಟುವಟಿಕೆಗಳನ್ನು ಹೋರಾಟಗಳನ್ನು ಸ್ಥಗಿತಗೊಳಿಸಲು IRB ತರಲು ಹವಣಿಸಲಾಯಿತು. ಈ ಮಸೂದೆಯು ಕೆಲವು ಆರಿಸಿದ ಔದ್ಯಮಗಳಲ್ಲಿ ಮುಷ್ಕರಗಳನ್ನು ನಿಷೇಧಿಸುತ್ತಿತ್ತು. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮನ್ನಣೆ ನೀಡುವುದನ್ನು ತಿರಸ್ಕರಿಸುವ ಅಂಶವಿತ್ತು. ಕಾರ್ಮಿಕ ಸಂಘಗಳ ಕಾರ್ಯ ನಿರ್ವಹಣೆಯಲ್ಲಿ ಅನೇಕ ಅಡೆತಡೆ ಒಡ್ಡುತ್ತಿತ್ತು. ಭೂತಲಿಂಗಂ ಸಮಿತಿ, IRB ಶಿಫಾರಸುಗಳನ್ನು ಭಾರತದ ಕಾರ್ಮಿಕವರ್ಗ ತಿರಸ್ಕರಿಸಿತು. ಅಭೂತಪೂರ್ವ ಮತಪ್ರದರ್ಶನಗಳು ಸಂಘಟಿಸಲ್ಪಟ್ಟಿತು. ಜನತಾಸರಕಾರ ಈ ವರದಿ ಶಿಫಾರಸುಗಳನ್ನು ಜಾರಿಗೊಳಿಸಲು ಪುನರಾಲೋಚಿಸಬೇಕಾಯಿತು. ಈ ರೀತಿಯ ಜನತಾ ಆಡಳಿತದ ವೈಖರಿ ಹಿಂದಿನ ಕಾಂಗ್ರೆಸ್ ಸರಕಾರದ ಆಡಳಿತವನ್ನೇ ಹೋಲುತ್ತಿತ್ತು.

ಭಯಂಕರ ದಬ್ಬಾಳಿಕೆಯಿದ್ದಾಗ್ಯೂ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಔದ್ಯಮಗಳಲ್ಲಿ ಹೋರಾಟಗಳು ಸಂಘಟಿಸಲ್ಪಟ್ಟವು. ಪಶ್ಚಿಮ ಬಂಗಾಳದಲ್ಲಿ ಪ್ರಿಂಟಿಂಗ್ ಪ್ರೆಸ್ ಕಾರ್ಮಿಕರ, ಜೂಟ್ ಕಾರ್ಮಿಕರ ಹೋರಾಟಗಳು ನಡೆದವು. ಬಾಂಬೆ ಟೆಕ್ಸ್‌ಟೈಲ್ ಕಾರ್ಮಿಕರ ಸಂಯುಕ್ತ ಹೋರಾಟನಡೆಯಿತು. ಮಹಾರಾಷ್ಟ್ರದ ರಾಜ್ಯಸರಕಾರೀ ನೌಕರರು 73ದಿನಗಳ ಪ್ರಚಂಡ ಮುಷ್ಕರ ಹೂಡಿದರು. ಅಲ್ಲದೇ ದೇಶದ ಅನೇಕ ಕಡೆ ಸಾರ್ವಜನಿಕ ಉದ್ದಿಮೆ (Public Sector Undertakings) ಗಳ ಕಾರ್ಮಿಕರು ಹೋರಾಟ ನಡೆಸಿದರು. ಈ ಹೋರಾಟದ ಅಲೆಗಳು ಕಾರ್ಮಿಕರ ಹೋರಾಟದ ಮನೋಭಾವವನ್ನು ಹೆಚ್ಚಿಸಿದವಲ್ಲದೇ ಕಾರ್ಮಿಕರ ಪ್ರಜ್ಞೆಯನ್ನು ಹೆಚ್ಚಿಸಲುಸಹಾಯಕವಾಯಿತು. ಹೆಚ್ಚಿನಂಶ ಹೋರಾಟಗಳು ದೀರ್ಘಾವಧಿಯವಾಗಿದ್ದವು. ಒಂದು ದಶಕದ ಘಟನೆಗಳು ಕೆಳಕಂಡ ಅಂಶಗಳನ್ನು ಸಾಬೀತು ಮಾಡುತ್ತವೆ.

1) ಕಾಂಗ್ರೆಸ್ ಜನತಾಗಳೆರಡೂ ಜಮೀನ್ದಾರಿ, ಬಂಡವಾಳಶಾಹಿ ವರ್ಗಗಳನ್ನು ಪ್ರತಿನಿಧಿಸುತ್ತ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸಿದವು.

2) ಜನತಾ ಸರಕಾರ ಕೆಲಮಟ್ಟಿಗೆ ಪ್ರಜಾಪ್ರಭುತ್ವವನ್ನು ಮರಳಿ ದೊರಕಿಸಿ ಕೊಟ್ಟರೂ ಸಹ ದುಡಿಯುವ ವರ್ಗದ ಹೋರಾಟಗಳನ್ನು ನಿರ್ದಯವಾಗಿ ಸದೆಬಡಿಯಿತು.

3) ಎರಡೂ ಸರಕಾರ ದಿವಾಳಿಖೋರ ಆರ್ಥಿಕ ನೀತಿಯಿಂದ ದೇಶದ ಸಾಮಾನ್ಯ ಜನತೆ ಅಪಾರ ಸಂಕಷ್ಟಕ್ಕೀಡಾಯಿತು.

4) ಬಂಡವಾಳಶಾಹಿ ಮುನ್ನಡೆ ಕಾರ್ಮಿಕ ವರ್ಗ ಬಲಿಷ್ಠವಿದ್ದೆಡೆ ತಡೆಹಿಡಿಯಲ್ಪಟ್ಟಿತು. ಈಅಂಶ ಪಶ್ಚಿಮ ಬಂಗಾಳದಲ್ಲಿ 1971 ಮತ್ತು 1977ರಲ್ಲಿ ಸಿದ್ಧವಾಯಿತು.

5) ಕೇವಲ ಒಂದೆರಡು ರಾಜ್ಯಗಳ ಕಾರ್ಮಿಕ ವರ್ಗದ ಬಲಿಷ್ಠ ಚಳುವಳಿ ಅಖಿಲ ಭಾರತ ರಾಜಕೀಯದಲ್ಲಿ ಯಶಸ್ವಿಯಾಗಿ ಮಧ್ಯಪ್ರವೇಶಿಸಲು ಸಾಧ್ಯವಾಯಿತು.

6) ಇಂದಿರಾಗಾಂಧಿ ಮತ್ತೆ ಬಲಿಷ್ಠವಾಗುತ್ತಿರುವುದು ಕೇವಲ ಜನತಾ ಸರಕಾರದ ವೈಫಲ್ಯ ಮಾತ್ರ ಕಾರಣವಲ್ಲ ಇದಕ್ಕೆ ದೇಶದ ಗುತ್ತೇದಾರಿ ಬಂಡವಾಳಶಾಹಿಗಳು ಆಕೆಯ ಬೆಂಬಲಕ್ಕಿರುವುದೂ ಕಾರಣ.

7) ಯಾವಾಗ ಆರ್ಥಿಕ ಬಿಕ್ಕಟ್ಟು ಹೆಚ್ಚಾಗುತ್ತೋ ಆವಾಗ ಸರ್ವಾಧಿಕಾರದತ್ತ ವಾಲುದು ಬವಂಡವಾಳಶಾಹಿ ವೈಶಿಷ್ಟ್ಯ.

ಒಂದು ದಶಕದ ಅನೇಕ ಅನುಭವಗಳಿಂದ ಹಣ್ಣಾದಕಾರ್ಮಿಕ ವರ್ಗ ಮತ್ತೆ ಈಗ ಲೋಕಸಭಾ ಚುನಾವಣೆಗಳನ್ನು ಎದುರಿಸಲಿದೆ. ಕಾರ್ಮಿಕವರ್ಗ ಎದುರಿಸಬೇಕಾದ ದೊಡ್ಡ ಗಂಡಾಂತರಗಳೆಂದರೆ ಸರ್ವಾಧಿಕಾರೀ, ಕೋಮುವಾದಿ ಪಕ್ಷಗಳನ್ನು ಸದೆಬಡಿದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸುವುದು. ಯಾವ ಸ್ಥಳಗಳಲ್ಲಿ ಎಡ ಪಕ್ಷಗಳ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿಲ್ಲವೋ ಅಲ್ಲಲ್ಲಿ ಸರ್ವಾಧಿಕಾರವನ್ನು ಕೋಮುವಾದಿ ಶಕ್ತಿಗಳನ್ನು ವಿರೋಧಿಸುತ್ತಿರುವ ಲೋಕದಳ ಮತ್ತು ಕಾಂಗ್ರೆಸ್ (ಯು) ಗಳನ್ನು ಬೆಂಬಲಿಸುವುದು ಆದ್ಯಕರ್ತವ್ಯವಾಗಿದೆ. ಲೋಕದಳ ಮತ್ತು ಕಾಂಗ್ರೆಸ್(ಯು) ಗಳನ್ನು ಬೆಂಬಲಿಸುವುದೆಂದರೆ ಪ್ರತಿಗಾಮಿಗಳು ಮತ್ತು ಕಾರ್ಮಿಕ ವಿರೋಧಿಗಳನ್ನು ಬೆಂಬಲಿಸವುದೆಂದು ಅಪಾರ್ಥ ಮಾಡಿಕೊಳ್ಳಬೇಕಾಗಿಲ್ಲ.

ಕಾರ್ಮಿಕ ವರ್ಗ ಈ ಆಹ್ವಾನವನ್ನು ಎದುರಿಸಲು ಸಾಕಷ್ಟು ಶಕ್ತಿಯುತವಾಗಿದೆ. ತನ್ನ ಮೇಲೆ ಯಾವುದೇ ಮೂಲೆಯಿಂದ ಬಂದ ಪ್ರಹಾರವನ್ನು ದೃಢವಾಗಿ ಎದುರಿಸಲು ಸಮರ್ಥವಾಗಿದೆ, ಈ ಶಕ್ತಿಯನ್ನು ಮೂಲೆಗಾಣಿಸುವುದು ಯಾರಿಂದಲೂ ಸಾಧ್ಯವಿಲ್ಲ. ಕಾರ್ಮಿಕ ವರ್ಗದ ಐಕ್ಯತೆಯಿದ್ದುದರಿಂದಲೇ ಲೋಕಸಭೆಯಲ್ಲಿ ಪ್ರಚಂಡ ಬಹುಮತವಿದ್ದಾಗ್ಯೂ ಜನತಾ ಸರಕಾರಕ್ಕೆ IRB ಯನ್ನು ಜಾರಿಗೆತರುವುದಾಗಲಿಲ್ಲ.

ಕಾರಣ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸುವುದು ಕಾರ್ಮಿಕ ವರ್ಗದ ಹಿತರಕ್ಷಣೆಯ ದೃಷ್ಟಿಯಿಂದ ತುಂಬಾ ಅವಶ್ಯವಾಗಿದೆ.

●

ಕಾಂಗ್ರೆಸ್ (ಐ) ಪ್ರಣಾಳಿಕೆ

[6ನೇ ಪುಟದಿಂದ]

ಆತನನ್ನು ಈಗಲೂ ಸಂರಕ್ಷಿಸುತ್ತಿರುವ ಮುಂದಾಳುಗಳಿರುವಂತಹ ಪಕ್ಷದಿಂದ ಇದು ಸಾಧ್ಯವೆ? ಕನಿಷ್ಟ ಎರಡು ಸಲ ಭಾರತೀಯರ (ಕಮ್ಯುನಿಸ್ಟ್ ಪಕ್ಷದ) ವಿರುದ್ಧ ಚುನಾವಣೆಯಲ್ಲಿ ಹೋರಾಡಲು ಅಮೇರಿಕಾದಿಂದ ಹಣ ಪಡೆದಿರುವ ಪಕ್ಷವೊಂದರಿಂದ ಇದು ಸಾಧ್ಯವಾಗುವ ಮಾತೆ?

ತಾನು ಅಧಿಕಾರದಲ್ಲಿದ್ದಾಗ ಚೀನಾದ ಮೇಲೆ ಕಣ್ಣಿಡಲು ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಅಣುಶಕ್ತಿ ಸಾಧನವೊಂದನ್ನು ತನ್ನ ನೆಲದಲ್ಲಿರಿಸಲು ಆಸ್ಪದ ಮಾಡಿಕೊಟ್ಟ ಪಕ್ಷವೊಂದು ಸ್ನೇಹ, ಸೌಹಾರ್ದ, ಸಾಮ್ರಾಜ್ಯಶಾಹಿಗೆ ವಿರೋಧ ಇತ್ಯಾದಿ ಮಾತುಗಳನ್ನಾಡಿದರೆ ಅವುಗಳನ್ನು ನಮ್ಮ ನೆರೆಹೊರೆಯ ದೇಶಗಳು ನಂಬಲು ಸಾಧ್ಯವೆ? ಕಾಂಗ್ರೆಸ್ (ಐ) ಪಕ್ಷ ಹೇಳುತ್ತಿರುವ ಅಲಿಪ್ತ ನೀತಿ ಮತ್ತು ನೆರೆಹೊರೆಯವರೊಂದಿಗೆ ಸ್ನೇಹ ಸಂಬಂಧವೆಂದರೆ ಇದು ಏನು?

●

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ನಾವು ಎಡ ಐಕ್ಯತೆಗೆ ಬದ್ಧರು

[ಒಂದನೇ ಪುಟದಿಂದ]

ಗಳಿಗೆ ಪಶ್ಚಾತ್ತಾಪ ಪಡುವ ಬದಲು, ತಮ್ಮ ಅಧಿಕಾರಾವಧಿಯಲ್ಲೇ ಸುಭಿಕ್ಷವಾಗಿತ್ತೆಂದು ಹೇಳುತ್ತಿದ್ದಾರೆ. ತಮ್ಮ ಹಿಂದಿನ ಅಕೃತ್ಯಗಳನ್ನು ಮುಂದುವರಿಸಲು ತಮಗೆ ಅಧಿಕಾರ ಬೇಡುತ್ತಿರುವ ಇಂದಿರಾಗಾಂಧಿಯವರು, "ಕ್ರಾಂತಿಯನ್ನು ಪೂರ್ತಿಗೊಳಿಸಲು" ತಮಗೆ ಮತ ನೀಡಿ ಎನ್ನುತ್ತಿದ್ದಾರೆ. ಜನತೆ ಈ ಎರಡೂ ಪಕ್ಷಗಳನ್ನು ತಿರಸ್ಕರಿಸಬೇಕೆಂದು ಕರೆನೀಡಿದರು. ಕಾಂ.ಎಂ.ಕೆ. ಭಟ್, ಎನ್.ಕೆ. ಉಪಾಧ್ಯಾಯ, ಹಾಗೂ ಪಿ.ರಾಮಚಂದ್ರರಾವ್ ಸಹಾ ಈ ಸಂದರ್ಭದಲ್ಲಿ ಮಾತನಾಡಿದರು.

ಸಂಜೆ 5-30 ಗಂಟೆಗೆ ಮಂಗಳೂರಿನ ನೆಹರೂ ಮೈದಾನದಲ್ಲಿ ಭಾರೀ ಬಹಿರಂಗ ಸಭೆ ನಡೆಯಿತು. ತಮ್ಮ ಭಾಷಣದಲ್ಲಿ ಕಾಂ. ಇ. ಎಂ. ಎಸ್. ಮಾತನಾಡುತ್ತಾ, ದೇಶಾದ್ಯಂತ ಸಿ.ಪಿ.ಎಂ, ಸಿ.ಪಿ.ಐ. ಹಾಗೂ ಇತರ ಎಡ ಪಕ್ಷಗಳು ಹತ್ತಿರ ಬರುತ್ತಿರುವುದು ಶುಭಚಿನ್ಹೆ. ಸಿ.ಪಿ.ಎಂ. ಬಿಟ್ಟು ಎಡ ಪಕ್ಷಗಳ ಐಕ್ಯತೆ ಎನ್ನುವುದು ವಾಸ್ತವಿಕತೆ ಆಗಲಾರದು. ಆದರೆ, ಕರ್ನಾಟಕದ ಸಿ.ಪಿ.ಐ. ಘಟಕವು ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗೆ ಬೆಂಬಲ ಕೊಡದೆ ಇರುವುದು ದುರದೃಷ್ಟಕರ. ಈ ಬಗ್ಗೆ ಸಿ.ಪಿ.ಐ. ಅರಸು ಕಾಂಗ್ರೆಸ್‌ಗೆ ಒತ್ತಾಯವನ್ನು ತರಬಹುದಿತ್ತು. ಆದರೂ ನಾವು ನಮ್ಮ ಪಕ್ಷದ ರಾಷ್ಟ್ರೀಯನೀತಿಯನ್ನು ಅನುಸರಿಸಿ ಎಡ ಪಕ್ಷಗಳ ಐಕ್ಯತೆಗೆ ಬದ್ಧರು, ಬೆಂಗಳೂರು ದಕ್ಷಿಣ ಲೋಕಸಭಾಕ್ಷೇತ್ರದಲ್ಲಿ ಸಿ.ಪಿ.ಐ. ಅಭ್ಯರ್ಥಿಯನ್ನು ಬೆಂಬಲಿಸುತ್ತೇವೆಂದು ನುಡಿದರು. ಕೇರಳದಲ್ಲಿ ಅಸ್ತಿತ್ವಕ್ಕೆ ಬಂದಿರುವ ಎಡ ಹಾಗೂ ಪ್ರಜಾಸತ್ತಾತ್ಮಕ ರಂಗ ದೇಶಾದ್ಯಂತ ಬರಬೇಕೆಂದರು.

ಕಾಂ.ಎಂ.ಕೆ. ಮಾತನಾಡುತ್ತಾ, ಜನತೆ ಎಂ.ಪಿ., ಎಂ.ಎಲ್. ಎ.ಗಳನ್ನು ಆರಿಸಿ ಕಳಿಸುವುದು, ಅವರು ಐದು ವರ್ಷ ವಿಶ್ರಾಂತಿ ತೆಗೆದುಕೊಳ್ಳಲಿ ಎಂದಲ್ಲ. ಜನತೆಯಿಂದ ಆಯ್ಕೆಯಾಗುವ ಪ್ರತಿನಿಧಿಗಳು ಸಂಸತ್ತಿಗೂ, ಜನತೆಗೂ ಮಧ್ಯೆ ಜೀವಂತ ಸಂಬಂಧಗಳನ್ನು ಇಟ್ಟುಕೊಳ್ಳಬೇಕೆಂದರು.

ಕಾಂ. ಪಿ. ರಾಮಚಂದ್ರರಾವ್ ಮಾತನಾಡುತ್ತಾ, ದೇಶದ ರೈತ, ಕಾರ್ಮಿಕ, ವಿದ್ಯಾರ್ಥಿ ಹಾಗೂ ಯುವಜನತೆ ಈ ಚುನಾವಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ಜನತೆಯು ನಿಜವಾದ ಹೋರಾಟಗಾರರನ್ನು ಆಯ್ಕೆ ಮಾಡಬೇಕೆಂದರು. ಘೋಷಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

○

ಸರಕಾರದ ನೀತಿಗೆ ಧಿಕ್ಕಾರ

ಕಾರವಾರ ತಾಲ್ಲೂಕು ಕಿಸಾನ್ ಸಭೆಯು ಬಾಳ್ಣಿಯಲ್ಲಿ ದಿ. 20-12-79 ರಂದು ಸಂಜೆಯ 4-30ಕ್ಕೆ ಕಾಂ. ಜಿವಾಜಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಗೆ ಕಾಂ. ಮ್ಹಾಳಸೇಕರ ಮತ್ತು ಕಾಂ. ಸಮಿಉಲ್ಲಾ ಹಾಜರಿದ್ದರು.

ಕಾಂ. ಎನ್. ಜಿ. ಮ್ಹಾಳಸೇಕರರವರು, ಕಿಸಾನ್ ಸಭೆಯನ್ನು ಬೆಳೆಸುವುದು, ಅದರ ಉಪಯೋಗ, ಸಂಘ ಏಕೆಬೇಕು ? ಎಂಬುದನ್ನು ವಿವರಿಸುವಾಗ ಚಿಕ್ಕಮಗಳೂರು ಜಿಲ್ಲೆಯ ಮುಡಿಗೇರಿಯಲ್ಲಿ ಶಂಭು ಎನ್ನುವ ಎಸ್ಟೇಟ್ ಕಾರ್ಮಿಕನ ಕೊಲೆಯನ್ನು ವಿವರಿಸಿದರು. ಸಭೆಯಲ್ಲಿ ಒಮ್ಮೆಲೇ ಘೋಷಣೆ ಪ್ರಾರಂಭಿಸಿದವು.

ಶಂಭುವನ್ನು ಕೊಲೆಗೈದ ಸರಕಾರಕ್ಕೆ ಧಿಕ್ಕಾರ!

ಮಾರುತಿ ಪವಾರನನ್ನು ಗುಂಡಿಕ್ಕಿ ಕೊಂದ ಸರಕಾರಕ್ಕೆ ಧಿಕ್ಕಾರ!

ಇವರ ಪರಿಹಾರಕ್ಕೆ ಯೋಗ್ಯ ಪರಿಹಾರ ಕೊಡಲೇಬೇಕು!

ಅಪರಾಧಿಗಳಿಗೆ ತಕ್ಕ ಶಿಕ್ಷೆಯಾಗಲೇಬೇಕು! ಎಂಬುದಾಗಿ ಘೋಷಿಸಿದರು.

ಸರಕಾರದ ಹಿಂಸಾತ್ಮಕ ನೀತಿಯನ್ನು ಖಂಡಿಸಿ, ಜನವರಿ 11 ರಂದು ರೈತರ ಬೃಹತ್ ಮೆರವಣಿಗೆಯೊಂದಿಗೆ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿ ಮನವಿ ಅರ್ಪಿಸಲು ಸಭೆಯು ನಿರ್ಧರಿಸಿತು.

ಅಧ್ಯಕ್ಷರ ಅನುಮತಿಯ ಮೇರೆಗೆ ಸಭೆ ಮುಕ್ತಾಯಗೊಂಡಿತು.

○

ವಿಚಾರ ಸಂಕಿರಣ

ತಾರೀಖು 23-12-79 ರಂದು ಭಾರತ ವಿದ್ಯಾರ್ಥಿ ಒಕ್ಕೂಟದ ಮೈಸೂರು ನಗರ ಶಾಖೆಯ ಆಶ್ರಯದಲ್ಲಿ "ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಿದ್ಯಾರ್ಥಿಗಳ ನಿಲುವು" ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣವನ್ನು ಉದ್ಘಾಟಿಸಿದ "ಸ್ಟಾರ್ ಆಫ್ ಮೈಸೂರ್" ಪತ್ರಿಕೆಯ ಸಂಪಾದಕ ಕೆ. ಬಿ ಗಣಪತಿಯವರು ಪ್ರಸ್ತುತ ರಾಜಕಾರಿಣಿಗಳಿಗೆ ಸರಿಯಾದ ಪಾಠಕಲಿಸಲು ವಿದ್ಯಾರ್ಥಿಗಳು ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ತಿಳಿಸಿದರು.

ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿವಿಧ ಕಾಲೇಜಿನ ಪ್ರತಿನಿಧಿಗಳು ಮತ್ತು ವಿವಿಧ ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳು ಚುನಾವಣೆಯಲ್ಲಿ ವಿದ್ಯಾರ್ಥಿಗಳ ನಿಲುವಿನ ಬಗ್ಗೆ ತಮ್ಮ ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಸಂಕಿರಣದ ಅಧ್ಯಕ್ಷತೆಯನ್ನು ಪ್ರೊ. ಎಲ್. ಶ್ರೀಕಂಠಯ್ಯ (ವಕೀಲರು)ನವರು ವಹಿಸಿದ್ದರು.

ಭಾರತ ವಿದ್ಯಾರ್ಥಿ ಒಕ್ಕೂಟ ಮೈಸೂರು ನಗರ ಶಾಖೆಯ ಅಧ್ಯಕ್ಷರಾದ ಶ್ರೀ ವೀರಭದ್ರರವರು ಪರಿಚಯ ಭಾಷಣ ಮಾಡಿದರು ಮತ್ತು ಖಜಾಂಚಿ ಕೆ.ಎಲ್. ಸುರಭಿ ಸ್ವಾಗತ ಮಾಡಿದರು. ಕೊನೆಯಲ್ಲಿ ಪ್ರಧಾನ ಕಾರ್ಯದರ್ಶಿ ನರಸಿಂಹೇಗೌಡರು ವಂದನಾರ್ಪಣೆ ಮಾಡಿದರು.

●

ಒಂದು ಸ್ಪಷ್ಟನೆ

ಇದೇ ಡಿಸೆಂಬರ್ 23 ಮತ್ತು 24 ರಂದು ಕೆಲವು ಪತ್ರಿಕೆಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಎಸ್. ಎಫ್. ಐ. ಅಧ್ಯಕ್ಷ ಹಾಗೂ ಬೆಂಗಳೂರಿನ 'ಫ್ಯಾಕ್ಟರಿ ವರ್ಕರ್ಸ್ ಯೂನಿಯನ್'ನ ಪ್ರಧಾನ ಕಾರ್ಯದರ್ಶಿ ಆಗಿರುವ ಶ್ರೀ ಎಸ್. ಜ್ಞಾನೇಶ್ವರ್ ಎಂಬುವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ವನ್ನು ತೊರೆದು ಇಂದಿರಾ ಕಾಂಗ್ರೆಸ್ ಸೇರಿರುವುದಾಗಿ ವರದಿಯಾಗಿದೆ.

ಚಿತ್ರದುರ್ಗದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆಯೇ ಇಲ್ಲದಿರುವಾಗ ಶ್ರೀ ಎಸ್. ಜ್ಞಾನೇಶ್ವರ್‌ರವರು ಸದಸ್ಯರಾಗುವ ಪ್ರಶ್ನೆಯೇ ಇಲ್ಲ. ಮೇಲ್ಕಾಣಿಸಿದ ಹೆಸರಿನ ಯಾವ ಸದಸ್ಯನೂ ನಮ್ಮ ಪಕ್ಷದಲ್ಲಿಲ್ಲ. "ಫ್ಯಾಕ್ಟರಿ ವರ್ಕರ್ಸ್ ಯೂನಿಯನ್" ಹೆಸರಿನ ಯಾವ ಸಂಘವೂ ಸಿ. ಐ. ಟಿ. ಯು.ಗೆ ಸೇರ್ಪಡೆಯಾಗಿಲ್ಲ ಅಥವಾ ಈ ಹೆಸರಿನ ಸಂಘವೊಂದು ರಿಜಿಸ್ಟರ್ ಆಗಿರುವುದೂ ನಮಗೆ ತಿಳಿದಿಲ್ಲ.

ಆದ್ದರಿಂದ ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಸಮಿತಿಯು ನೀಡಿರುವ ಹೇಳಿಕೆ ಕೇವಲ ಕಾಲ್ಪನಿಕವಾದದ್ದು ಹಾಗೂ ಕುಚೋದ್ಯತನದಿಂದಕೂಡಿದ್ದು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಪ್ರಕಟಣೆಯೊಂದರಲ್ಲಿ ತಿಳಿಸಿದೆ.

○

ಕಾಂ. ಮಹಾಬಲೇಶ್ವರ ಭಟ್‌ರವರ ವಿಜಯವನ್ನು ಅವಲಂಭಿಸಿದೆ

[ಒಂದನೇ ಪುಟದಿಂದ]

ದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕ್ಷೇತ್ರದಲ್ಲಿ ಅನೇಕ ದಶಕಗಳಿಂದ ರೈತರು, ಹೆಂಚಿನ ಕಾರ್ಮಿಕರು, ತೋಟಕಾರ್ಮಿಕರು, ಕೃಷಿಕೂಲಿಗಾರರು, ಬೀಡಿ ಮಜೂರರು, ವಿದ್ಯಾರ್ಥಿ, ಯುವಜನತೆ ಹಾಗೂ ಜನಸಾಮಾನ್ಯರ ಮಧ್ಯೆ ಅವರ ಸಮಸ್ಯೆಗಳಿಗಾಗಿ ದುಡಿದಿದೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಸಹಸ್ರಾರು ಕಾರ್ಮಿಕರು ಪಕ್ಷದ ಬೆನ್ನೆಲುಬಾಗಿದ್ದಾರೆ.

ದೇಶದಲ್ಲಿ ಅತಿದೊಡ್ಡ ಎಡಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ದೇಶದಲ್ಲಿ ಸರ್ವಾಧಿಕಾರದ ವಿರುದ್ಧ ಹಾಗೂ ಜಾತೀಯವಾದದ ವಿರುದ್ಧ ಅವಿರತವಾಗಿ ದುಡಿದಿದೆ. ಪಕ್ಷದ ನಾಯಕತ್ವ ರಾಜ್ಯದಲ್ಲಿ ಅನೇಕ ದೊಡ್ಡ,ದೊಡ್ಡ ಹೋರಾಟಗಳಿಗೆ ನೇತೃತ್ವ ನೀಡಿದೆ. ರಾಜ್ಯದಲ್ಲಿ ಅತ್ಯಂತ ಪ್ರಾಮಾಣಿಕ ನಾಯಕತ್ವವನ್ನು ಹೊಂದಿರುವ ಪಕ್ಷವೆಂದು ಹೆಸರಾಗಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಶ್ರೇಷ್ಠ ಹೋರಾಟಗಾರರನ್ನು ಹೊಂದಿದೆ.

ನಾವು ಜನತೆಯ ಮುಂದೆ, ನಾವು ಮಾಡಿರುವ ಕೆಲಸಗಳಿಗಾಗಿ, ದುಡಿಯುವ ವರ್ಗಕ್ಕೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ಕೊಡಿಸುವುದಕ್ಕಾಗಿ ಮತ ಕೇಳುತ್ತಿದ್ದೇವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧ್ಯೇಯ, ಧೋರಣೆ, ಕಾರ್ಯಕ್ರಮಗಳನ್ನು ಅರಿತು, ಜನತೆ ಮತ ನೀಡಬೇಕಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿರುವ ಮಹಾಬಲೇಶ್ವರ ಭಟ್ಟರು, ವಿದ್ಯಾವಂತರು, ರೈತ, ಕಾರ್ಮಿಕ, ವಿದ್ಯಾರ್ಥಿ ಯುವಜನತೆಯ ಸಂಘಟನೆಗಳಲ್ಲಿ ದುಡಿದು ಅಪಾರ ಅನುಭವಗಳಿಸಿದವರು. ಪಕ್ಷದ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಕಾಂ. ಮಹಾಬಲೇಶ್ವರಭಟ್‌ರವರಿಗೆ ಮತ ನೀಡುವುದರ ಮೂಲಕ, ದುಡಿಯುವ ವರ್ಗಕ್ಕೆ ದೆಹಲಿಯ ಸಂಸತ್ತಿನಲ್ಲಿ ತಮ್ಮ ನೋವು, ನಲಿವುಗಳನ್ನು ಪ್ರತಿನಿಧಿಸಲು ಅವಕಾಶ ಕಲ್ಪಿಸಿಕೊಡಬೇಕಾಗಿ ಅರಿಕೆ.

○

ಮಂಗಳೂರಲ್ಲಿ ಮಾರ್ಕ್ಸಿಸ್ಟ್ ಅಭ್ಯರ್ಥಿಗೆ ಲೋಕದಳದ ಬೆಂಬಲ

ಬದಲಾಗುತ್ತಿರುವ ಪರಿಸ್ಥಿತಿಯನ್ನು ಗಮನಿಸಿ, ಲೋಕದಳದ ಕೇಂದ್ರ ನಾಯಕತ್ವದ ಆದೇಶದಂತೆ ಪಕ್ಷದ ರಾಜ್ಯಘಟಕವು "ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು" ಹೋರಾಡುವ ಸಲುವಾಗಿ ಮಾರ್ಕ್ಸಿಸ್ಟ್ ಪಕ್ಷದ ಅಭ್ಯರ್ಥಿ ಎಂ.ಕೆ.ಭಟ್‌ಅವರ ಪರವಾಗಿ, ಮಂಗಳೂರು ಲೋಕಸಭಾ ಕ್ಷೇತ್ರದಿಂದ ತನ್ನ ಅಭ್ಯರ್ಥಿ ಐ.ಎಂ. ಕಾರ್ಯಪ್ಪನವರ ಉಮೇದ್ವಾರಿಕೆಯನ್ನು ಹಿಂತೆಗೆದುಕೊಳ್ಳುವುದಾಗಿ ಕರ್ನಾಟಕ ರಾಜ್ಯ ಲೋಕದಳದ ಕಾರ್ಯಾಧ್ಯಕ್ಷ ಟಿ.ಎನ್. ನಾಗರಾಜ್ ಹೇಳಿರುತ್ತಾರೆ.

●

ಸಿ. ಪಿ. ಐ. (ಎಂ) ಗೆ ಬೆಂಬಲ

ಬಂಟ್ವಾಳ ತಾಲೂಕಿನ ಸಿ.ಪಿ.ಐ.ನಾಯಕರಾದ ವಾಸುಗಟ್ಟಿ ಮತ್ತಿತರ ಸದಸ್ಯರು ಸಿ.ಪಿ.ಐ.ಯ ರಾಷ್ಟ್ರೀಯ ಧೋರಣೆಯಾದ ಸಿ ಪಿ.ಐ. (ಎಂ) ಮತ್ತು ಸಿ.ಪಿ.ಐ. ಪಕ್ಷಗಳು ಈ ಲೋಕಸಭಾ ಚುನಾವಣೆಯಲ್ಲೂ ಮತ್ತು ಮುಂದಕ್ಕೂ ಒಂದುಗೂಡಿ ಹೋರಾಟ ಮಾಡಬೇಕೆಂದು ತೀರ್ಮಾನಕ್ಕೆ ಅನುಗುಣವಾಗಿ ತಾವೆಲ್ಲರೂ ಮಂಗಳೂರು ಕ್ಷೇತ್ರದಿಂದ ಸ್ಪರ್ಧಿಸಿರುವ ಸಿ.ಪಿ. ಐ.(ಎಂ) ನ ಅಭ್ಯರ್ಥಿಯಾದ ಕಾಂ. ಎಂ. ಕೆ. ಭಟ್‌ರವರಿಗೆ ಕೆಲಸಮಾಡಲು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ. ಈ ಧೋರಣೆಯನ್ನು ಸ್ಥಳೀಯ ಸಿ.ಪಿ.ಐ. ನಾಯಕರು ವಿರೋಧಿಸುತ್ತಿರುವುದು ಆಶ್ಚರ್ಯಕರವಾಗಿದೆ. ಅವರ ರಾಷ್ಟ್ರೀಯ ಧೋರಣೆಗಳಿಗನುಗುಣವಾಗಿ ಕಾಂ. ಭಟ್‌ರವರಿಗೆ ಬೆಂಬಲಕೊಡಲು ದಿಟ ನಿರ್ಧಾರಕ್ಕೆ ಬಂದ ವಾಸುಗಟ್ಟಿ ಮತ್ತವರ ಸಂಗಡಿಗರ ತೀರ್ಮಾನವನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR M. K. BHAT